# ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996.

## ಪ್ರಕರಣಗಳ ಕ್ರಮ ಪಟ್ಟಿ

**ಪ್ರಕರಣಗಳು:**

### ಅಧ್ಯಾಯ I

### ಪ್ರಾರಂಭಿಕ


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.
2. ಪರಿಭಾಷೆಗಳು.


### ಅಧ್ಯಾಯ II

### ಎಸ್ಟೇಟಿನ ವರ್ಗಾವಣೆ ಮತ್ತು ನಿಹಿತಗೊಳ್ಳುವಿಕೆ


3. ರಾಜ್ಯ ಸರ್ಕಾರಕ್ಕೆ ಎಸ್ಟೇಟನ್ನು ವರ್ಗಾಯಿಸುವುದು ಮತ್ತು ಅದರಲ್ಲಿ ನಿಹಿತಗೊಳಿಸುವುದು.
4. ನಿಹಿತವಾಗುವುದರ ಸಾಮಾನ್ಯ ಪರಿಣಾಮ.
5. ಕೆಲವು ಪೂರ್ವ ಹೊಣೆಗಾರಿಕೆಗಳಿಗೆ ಮಾಲೀಕರು ಅಥವಾ ವರ್ಗಾವಣೆ ಪಡೆದವರು ಬದ್ಧರಾಗುವುದು.
6. ಎಸ್ಟೇಟು ಮಂಡಲಿಯಲ್ಲಿ ನಿಹಿತಗೊಳ್ಳುವ ಬಗ್ಗೆ ನಿರ್ದೇಶನ ನೀಡಲು ರಾಜ್ಯ ಸರ್ಕಾರದ ಅಧಿಕಾರ.
7. ಮಾಲೀಕರು, ವರ್ಗಾವಣೆ ಪಡೆದವರು ಅಥವಾ ಇತರ ಹಿತಾಸಕ್ತ ವ್ಯಕ್ತಿಗಳಿಗೆ ನೀಡಬೇಕಾದ ಮೊಬಲಗು.
8. ಹೆಚ್ಚಿನ ಮೊಬಲಗುಗಳ ಸಂದಾಯ.


### ಅಧ್ಯಾಯ III

### ಎಸ್ಟೇಟಿನ ನಿರ್ವಹಣೆ


9. ಎಸ್ಟೇಟಿನ ನಿರ್ವಹಣೆ.
10. ಎಸ್ಟೇಟಿನ ನಿರ್ವಹಣೆಯ ಪ್ರಭಾರದಲ್ಲಿರುವ ವ್ಯಕ್ತಿಗಳ ಕರ್ತವ್ಯಗಳು.
11. ತಮ್ಮ ಸ್ವಾಧೀನದಲ್ಲಿರುವ ಆಸ್ತಿಗಳ ಲೆಕ್ಕ ಕೊಡಲು ವ್ಯಕ್ತಿಗಳ ಕರ್ತವ್ಯ.


### ಅಧ್ಯಾಯ IV

### ಹಣ ಸಂದಾಯದ ಕಮೀಷನರು


12. ಹಣ ಸಂದಾಯದ ಕಮೀಷನರ ನೇಮಕ.
13. ಕಮೀಷನರಿಗೆ ರಾಜ್ಯ ಸರ್ಕಾರದಿಂದ ಹಣ ಸಂದಾಯ.
14. ರಾಜ್ಯ ಸರ್ಕಾರದ ಮತ್ತು ಮಂಡಲಿಯ ನಿರ್ದಿಷ್ಟ ಅಧಿಕಾರಗಳು.
15. ಕ್ಲೇಮುಗಳನ್ನು ಕಮೀಷನರಿಗೆ ಸಲ್ಲಿಸತಕ್ಕದ್ದು.
16. ಕ್ಲೇಮುಗಳ ಆದ್ಯತೆ.
17. ಕ್ಲೇಮುಗಳ ಪರಿಶೀಲನೆ.
18. ಕ್ಲೇಮುಗಳ ಅಂಗೀಕಾರ ಅಥವಾ ನಿರಾಕರಣೆ.
19. ಕ್ಲೇಮುದಾರರಿಗೆ ಕಮಿಷನರಿಂದ ಮೊಬಲಗಿನ ಹಂಚಿಕೆ.

19ಎ. ಮಾಲೀಕರಿಗೆ, ವರ್ಗಾವಣರ ಪಡೆದವರಿಗೆ ಮತ್ತು ಹಿತಾಸಕ್ತಿಯುಳ್ಳ ಇತರೆ ವ್ಯಕ್ತಿಗಳಿಗೆ ಮೊಬಲಗಿನ ಹಂಚಿಕೆ

20. ಹಂಚಿಕೆ ಮಾಡದ ಅಥವಾ ಕ್ಲೇಮು ಮಾಡದ ಮೊಬಲಗಿನ ಹಣವನ್ನು ಸಾಮಾನ್ಯ ಕಂದಾಯ ಖಾತೆಗೆ ಜಮೆ ಮಾಡತಕ್ಕದ್ದು.
21. ಟ್ರಸ್ಟಿಗಳ ಮಂಡಲಿ.
22. ಮಂಡಳಿಯ ಅಧಿಕಾರಗಳು ಮತ್ತು ಕರ್ತವ್ಯಗಳು.

23. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ನೇಮಕ.
24. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು.
25. ಮಂಡಲಿಯಿಂದ ಅಥವಾ ಮಂಡಲಿಯ ವಿರುದ್ಧ ಹೂಡಲಾಗುವ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳು.
26. ನಿಧಿ.
27. ಸಾಲ ತೆಗೆದುಕೊಳ್ಳಲು ಅಧಿಕಾರ.
28. ನಿಧಿಯ ಬಳಕೆ.
29. ಲೆಕ್ಕಪರಿಶೋಧನೆ.
30. ಬಜೆಟ್

**ಅಧ್ಯಾಯ VI**

**ಸಂಕೀರ್ಣ**

31. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.
32. ಮಂಡಲಿಯು ಸ್ಥಿರೀಕರಿಸಿದ ಹೊರತು ಕರಾರು ಪರಿಣಾಮಕಾರಿಯಾಗಿರುವುದು ನಿಂತು ಹೋಗುವುದು.
33. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.
34. ದಂಡನೆಗಳು.
35. ಕಂಪನಿಗಳಿಂದ ಅಪರಾಧಗಳು.
36. ಪರಿಷ್ಕರಣೆ.
37. ನಿಯಮಗಳ ರಚನಾಧಿಕಾರ.
38. ತೊಂದರೆಗಳನ್ನು ನಿವಾರಿಸುವ ಅಧಿಕಾರ.

ಅನುಸೂಚಿ I

ಅನುಸೂಚಿ II

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

## I

**1996ರ ಅಧಿನಿಯಮ ಸಂಖ್ಯೆ 19.**- ಡಾ. ಸ್ವೆತೋಸ್ಲಾವ್ ರೋರಿಕ್ ಮತ್ತು ಶ್ರೀಮತಿ ದೇವಿಕಾರಾಣಿ ರೋರಿಕ್ ಅವರು ಅನಾರೋಗ್ಯಕ್ಕೀಡಾಗಿ ಸ್ವಾಭಾವಿಕ ಒತ್ತಡಗಳಿಂದ ನಗರದ ಹೋಟೇಲೊಂದರಲ್ಲಿ ಪ್ರತ್ಯೇಕವಾಗಿ ಉಳಿದಿದ್ದುದರಿಂದ, ತಾತಗುಣಿ ಎಸ್ಟೇಟ್ ಎಂದು ಸುಪರಿಚಿತವಾದ ಅವರ ಏಸ್ಟೇಟಿನಲ್ಲಿರುವ ಸ್ವತ್ತುಗಳ ಅಸ್ತಿತ್ವಕ್ಕೆ ಪಟ್ಟಭದ್ರ ಹಿತಾಸಕ್ತಿಗಳು ಹಾನಿಯುಂಟು ಮಾಡಲು ಪ್ರಾರಂಭಿಸಿದ್ದಲ್ಲದೆ ಸದರಿ ಸ್ವತ್ತಿನ ಸ್ವಾಧೀನತೆಯನ್ನು ಅಪಹರಿಸಲು ಪ್ರಯತ್ನಿಸಿದ್ದರು. ಸೂಕ್ತ ಗಮನ ಹರಿಸುವವರಿಲ್ಲದೆ ಪ್ರಾಚೀನ ಕಲಾಕೃತಿ ಮತ್ತು ಕಲಾವಸ್ತು, ಕೆತ್ತನೆ ಹಾಗೂ ಮಹತ್ವದ ವರ್ಣಚಿತ್ರಗಳು ಹಾಳಾಗುತ್ತಿವೆ. ಸ್ವತ್ತಿಗೆ ಸಂಬಂಧಪಟ್ಟಂತೆ ಸ್ಪಷ್ಟವಾದ ಹಕ್ಕುಪತ್ರಗಳಿಲ್ಲವಾದ್ದರಿಂದ ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳುವುದು ಸಾಧ್ಯವಾಗದೇ ಈ ಭೂಮಿಯಲ್ಲಿರುವ ಸಮೃದ್ಧ ಸಂಪತ್ತು ನಶಿಸಿ ಹೋಗುತ್ತಿದೆ. ಅಮೂಲ್ಯವಾದ ಆಭರಣಗಳು ಮತ್ತು ಪ್ರಾಚೀನ ಕಲಾಕೃತಿಗಳನ್ನು ರಹಸ್ಯವಾಗಿ ಮಾರಾಟ ಮಾಡಲಾಗಿದ್ದು ಅವುಗಳನ್ನು ರೋರಿಕ್ ದಂಪತಿಗಳಿಗೆ ತಮ್ಮ ಉದ್ಯೋಗ ಸಂಬಂಧದಿಂದಾಗಿ ಆತ್ಮೀಯರಾಗಿದ್ದ ವ್ಯಕ್ತಿಗಳು ತೆಗೆದುಕೊಂಡಿದ್ದರು.

ಆದ್ದರಿಂದ, ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಆರ್ಜಿಸುವುದಕ್ಕೆ ಮತ್ತು ಅದರಲ್ಲಿರುವ ಅಮೂಲ್ಯವಾದ ಮರಗಳು, ವರ್ಣಚಿತ್ರಗಳು, ಕಲಾವಸ್ತುಗಳು ಮತ್ತು ಕೆತ್ತನೆಗಳನ್ನು ಸಂರಕ್ಷಿಸುವ ಸಲುವಾಗಿ ಹಾಗೂ ಕಲಾವಸ್ತು ಪ್ರದರ್ಶನ ಮಂದಿರ ಹಾಗೂ ಸಂಗ್ರಹಾಲಯವನ್ನು ಸ್ಥಾಪಿಸುವುದಕ್ಕಾಗಿ, ಸದರಿ ಎಸ್ಟೇಟಿನ ಸೂಕ್ತ ಆಡಳಿತ ನಿರ್ವಹಣೆ ಮಾಡುವುದಕ್ಕೆ ಈ ಅಧಿನಿಯಮದಡಿ ಸ್ಥಾಪಿಸಲಾದ ಟ್ರಸ್ಟಿಗೆ ಅದನ್ನು ವರ್ಗಾಯಿಸುವುದು ಅವಶ್ಯವೆಂದು ಭಾವಿಸಲಾಗಿದೆ.

ಅದೇ ಪ್ರಕಾರ, ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧ್ಯಾದೇಶ, 1992ರ ಕರಡನ್ನು, ಅಧ್ಯಾದೇಶಕ್ಕೆ ರಾಷ್ಟ್ರಪತಿಯವರ ಪೂರ್ವ ಸೂಚನೆಗಳನ್ನು ಪಡೆಯಲು ಭಾರತ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಈಗ ಭಾರತ ಸರ್ಕಾರವು ಪ್ರಸ್ತಾವಿತ ಶಾಸನಕ್ಕೆ ಅವರಿಂದ ಯಾವುದೇ ಆಕ್ಷೇಪಣೆಯಿಲ್ಲವೆಂದು ತಿಳಿಸಿದ್ದು, ಅದನ್ನು ವಿಧೇಯಕ ರೂಪದಲ್ಲಿ ಮಂಡಿಸಲು ಸಲಹೆ ಮಾಡಿದೆ. ವಿಧೇಯಕದಲ್ಲಿ ಇತರ ವಿಷಯಗಳೊಂದಿಗೆ ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲಾಗಿದೆ.-

(i) ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟಿನ ಆರ್ಜನೆ;

(ii) ಎಸ್ಟೇಟನ್ನು ಸರ್ಕಾರದಲ್ಲಿ ನಿಹಿತಗೊಳಿಸಲು ಐದು ಕೋಟಿ ರೂಪಾಯಿ ಮೊಬಲಗನ್ನು ಸಂದಾಯ ಮಾಡುವುದು;

(iii) ಮೊಬಲಗನ್ನು ವಿತರಣೆ ಮಾಡಿದ ಉದ್ದೇಶಕ್ಕಾಗಿ ಸಂದಾಯ ಕಮಿಷನರ್‌ನನ್ನು ನೇಮಕ ಮಾಡುವುದು;

(iv) ಎಸ್ಟೇಟಿನ ಆಡಳಿತ ಮತ್ತು ವ್ಯವಸ್ಥಾಪನೆಯ ಉದ್ದೇಶಕ್ಕಾಗಿ ಸ್ಥಾಪಿಸಲಾದ ಟ್ರಸ್ಟಿಗಳ ಮಂಡಲಿಗೆ ಎಸ್ಟೇಟನ್ನು ವರ್ಗಾಯಿಸುವುದು.

ಆದ್ದರಿಂದ ವಿಧೇಯಕ.

(1996ರ ವಿಧಾನ ಸಭಾ ವಿದೇಯಕ ಸಂಖ್ಯೆ 18 ಕಡತ ಸಂಖ್ಯೆ ಲಾ 28 ಎಲ್.ಜಿ.ಎಲ್ 92ರಲ್ಲಿದ್ದಂತೆ.)

## II

**2001ರ ತಿದ್ದುಪಡಿ ಅಧಿನಿಯಮ ಸಂಖ್ಯೆ 19:-** ರೋರಿಕ್ ಮತ್ತು ದೇವಿಕಾರಾಣಿ ರೋರಿಕೆ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ ಸಂವಿಧಾನಾತ್ಮಕ ಮಾನ್ಯತೆಯನ್ನು 1996ರ ರಿಟ್ ಅರ್ಜಿ ಸಂಖ್ಯೆ 32560ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಗಿದೆ. ಮಾಲೀಕರು, ವರ್ಗಾವಣೆ ಪಡೆದವರು ಮತ್ತು ಎಸ್ಟೇಟಿನಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ಹಣ ಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಅಧಿನಿಯಮದಲ್ಲಿ ಸಮರ್ಪಕ ಮತ್ತು ಪರಿಣಾಮಕಾರಿಯಾದ ವ್ಯವಸ್ಥೆಯನ್ನು ಕಲ್ಪಿಸುವುದಕ್ಕಾಗಿ ಸದರಿ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಭಾವಿಸಲಾಗಿದೆ.

(i) 7 ಮತ್ತು 8ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಮೊಬಲಗನ್ನು ಪೂರ್ಣವಾಗಿ ಅಥವಾ ಭಾಗಶ: ಪಡೆಯುವಲ್ಲಿ ಎಸ್ಟೇಟಿನ ಮಾಲೀಕರು, ವರ್ಗಾವಣೆ ಪಡೆದವರು ಅಥವಾ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಹೊಂದಿರುವ ಹಕ್ಕಿಗೆ ಸಂಬಂಧಿಸಿದಂತೆ, ಸಂದೇಹ ಅಥವಾ ವಿವಾದ ಉಂಟಾದ ಸಂದರ್ಭದಲ್ಲಿ, ಈ

ವಿಷಯವನ್ನು ಸಿವಿಲ್ ನ್ಯಾಯಾಲಯಕ್ಕೆ ಉಲ್ಲೇಖಿಸಲು ಹಣ ಸಚಿದಾಯದ ಕಮೀಷನರಿಗೆ ಅಧಿಕಾರವನ್ನು ನೀಡುವುದು; ಮತ್ತು

(ii) ನ್ಯಾಯಾಲಯದ ತೀರ್ಪಿಗನುಸಾರವಾಗಿ ಮೊಬಲಗನ್ನು ಹಂಚಿಕೆ ಮಾಡುವುದು.

ಆದ್ದರಿಂದ ವಿಧೇಯಕ.

(2001ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 1 ಕಡತ ಸಂಖ್ಯೆ ಸಂವ್ಯಶಾಇ 35 ಶಾಸನ 2001)

**III**

**2017ರ ತಿದ್ದುಪಡಿ ಅಧಿನಿಯಮ ಸಂಖ್ಯೆ 33.–** ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 32560/96ರಲ್ಲಿ ಟ್ರಸ್ಟಿಗಳ ಮಂಡಳಿಯಲ್ಲಿ ರಷ್ಯಾದ ಪ್ರತಿನಿಧಿಗಳನ್ನು ಸೇರಿಸಿರುವುದು ಅಧಿಕಾರಾತೀತವೆಂದು (ultra-vires) ಆದೇಶಿಸಿದೆ. ಆದುದರಿಂದ ಟ್ರಸ್ಟಿಗಳ ಮಂಡಳಿಯಲ್ಲಿ ರಷ್ಯಾದ ಪ್ರತಿನಿಧಿಗಳಿಗೆ ಸಂಬಂಧಿಸಿದ ಉಪಬಂಧಗಳನ್ನು ಬಿಟ್ಟುಬಿಡುವುದು ಅವಶ್ಯಕವಾಗಿದೆ.

ಆದುದರಿಂದ ಈ ವಿಧೇಯಕ.

[2017ರ ವಿಧಾನಸಭೆಯ ವಿಧೇಯಕ ಸಂಖ್ಯೆ:30 ಕಡತ ಸಂಖ್ಯೆ:ಸಂವ್ಯಶಾಇ 08 ಶಾಸನ 2017]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 32ನೆಯನಮೂದನೆಯಡಿಯಲ್ಲಿ ಬರುತ್ತದೆ.]

* * * *

# 1996ರ ಕರ್ನಾಟಕ ಅಧಿನಿಯಮ ಸಂಖ್ಯೆ 19

*(1996ರ ನವೆಂಬರ್ ಹದಿನೆಂಟನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996.

*(1996ರ ನವೆಂಬರ್ ಹದಿನೈದನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ)*

*(ಅಧಿನಿಯಮ 2001ರ ಸಂಖ್ಯೆ 19 ಮತ್ತು 2017 ರ 33ರಲ್ಲಿ ತಿದ್ದುಪಡಿಯಾದಂತೆ)*

ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಆರ್ಜಿಸುವುದಕ್ಕೆ ಮತ್ತು ಅದರಲ್ಲಿರುವ ಅಮೂಲ್ಯ ಸಸ್ಯ ಸಂಪತ್ತು, ವರ್ಣಚಿತ್ರಗಳು, ಕಲಾವಸ್ತುಗಳು ಮತ್ತು ಕೆತ್ತನೆಗಳನ್ನು ಸಂರಕ್ಷಿಸುವ ಸಲುವಾಗಿ ಸದರಿ ಎಸ್ಟೇಟಿನ ಸೂಕ್ತ ಆಡಳಿತ ನಿರ್ವಹಣೆ ಮಾಡುವುದಕ್ಕೆ ಮತ್ತು ಕಲಾವಸ್ತು ಪ್ರದರ್ಶನ ಮಂದಿರ ಹಾಗೂ ಸಂಗ್ರಹಾಲಯವನ್ನು ಸ್ಥಾಪಿಸುವುದಕ್ಕಾಗಿ ಅದನ್ನು ಈ ಅಧಿನಿಯಮದ ಅಡಿ ಸ್ಥಾಪಿಸಲಾದ ಟ್ರಸ್ಟಿಗೆ ವರ್ಗಾಯಿಸುವುದಕ್ಕೆ ಹಾಗೂ ಅದಕ್ಕೆ ಸಂಬಂಧಪಟ್ಟ ಅಥವಾ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಆರ್ಜಿಸುವುದಕ್ಕೆ ಮತ್ತು ಅದರಲ್ಲಿರುವ ಅಮೂಲ್ಯ ಸಸ್ಯ ಸಂಪತ್ತು, ವರ್ಣಚಿತ್ರಗಳು, ಕಲಾವಸ್ತುಗಳು ಮತ್ತು ಕೆತ್ತನೆಗಳನ್ನು ಸಂರಕ್ಷಿಸುವ ಸಲುವಾಗಿ ಸದರಿ ಎಸ್ಟೇಟಿನ ಸೂಕ್ತ ಆಡಳಿತ ನಿರ್ವಹಣೆ ಮಾಡುವುದಕ್ಕೆ ಮತ್ತು ಕಲಾವಸ್ತು ಪ್ರದರ್ಶನ ಮಂದಿರ ಹಾಗೂ ಸಂಗ್ರಹಾಲಯವನ್ನು ಸ್ಥಾಪಿಸುವುದಕ್ಕಾಗಿ ಅದನ್ನು, ಈ ಅಧಿನಿಯಮದ ಅಡಿ ಸ್ಥಾಪಿಸಲಾದ ಟ್ರಸ್ಟಿಗೆ ವರ್ಗಾಯಿಸುವುದಕ್ಕೆ ಹಾಗೂ ಅದಕ್ಕೆ ಸಂಬಂಧಪಟ್ಟ ಅಥವಾ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಅಗತ್ಯವಾಗಿರುವುದರಿಂದ;

ಮತ್ತು ಮೇಲೆ ಹೇಳಲಾದ ಉದ್ದೇಶಕ್ಕಾಗಿ, ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟನ್ನು ಶಾಸನದ ಮೂಲಕ ಆರ್ಜನೆ ಮಾಡುವುದಕ್ಕೆ ಮತ್ತು ವರ್ಗಾವಣೆ ಮಾಡುವುದಕ್ಕೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

### ಅಧ್ಯಾಯ I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕದಂದು][1] ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಈ ಅಧಿನಿಯಮವು ದಿನಾಂಕ 21-11-1996 ರಿಂದ ಅಧಿಸೂಚನೆ ಮೂಲಕ ಜಾರಿಗೊಂಡಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು,-

(ಎ) "ಗೊತ್ತುಪಡಿಸಲಾದ ದಿನಾಂಕ" ಎಂದರೆ ಈ ಅಧಿನಿಯಮ ಅಥವಾ ಅದರ ಯಾವುದೇ ಉಪಬಂಧವು ಜಾರಿಯಲ್ಲಿ ಬರುವ ದಿನಾಂಕ;

(ಬಿ) "ಮಂಡಲಿ" ಎಂದರೆ ಈ ಅಧಿನಿಯಮದ 21ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಟ್ರಸ್ಟಿಗಳ ಮಂಡಲಿ;

(ಸಿ) “ಕಮಿಷನರ್” ಎಂದರೆ ಈ ಅಧಿನಿಯಮದ 12ನೇ ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಹಣ ಸಂದಾಯದ ಕಮಿಷನರ್;

(ಡಿ) “ಕಾರ್ಯನಿರ್ವಾಹಕ ಅಧಿಕಾರಿ” ಎಂದರೆ ಈ ಅಧಿನಿಯಮದ 23ನೇ ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಕಾರ್ಯನಿರ್ವಾಹಕ ಅಧಿಕಾರಿ;

(ಇ) “ಮಾಲೀಕರು” ಎಂದರೆ ಖನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಭೂಮಿಯನ್ನು ಹೊಂದಿದ್ದ ಮೃತ ಡಾ:ಸ್ವೆತೋಸ್ಲಾವ್ ರೋರಿಕ್ ಮತ್ತು ಮೃತ ಶ್ರೀಮತಿ ದೇವಿಕಾರಾಣಿ ರೋರಿಕ್ ಮತ್ತು ಅದು ಅಂಥ ಭೂಮಿಯ ಬಗ್ಗೆ ಅವರ ವಾರಸುದಾರರೆಂದು ಅಥವಾ ಕಾನೂನುಸಮ್ಮತ ಪ್ರತಿನಿಧಿಗಳೆಂದು ಹಕ್ಕು ಕೋರಿಕೆ ಸಲ್ಲಿಸುವ ಯಾರೇ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ;

(ಎಫ್) “ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್” ಎಂದರೆ ಖನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಮತ್ತು ಮೃತ ಡಾ:ಸ್ವೆತೋಸ್ಲಾವ್ ರೋರಿಕ್ ಮತ್ತು ಮೃತ ಶ್ರೀಮತಿ ದೇವಿಕಾರಾಣಿ ರೋರಿಕ್ ಅವರಿಗೆ ಅಥವಾ ಅವರಿಬ್ಬರಿಗೂ ಸೇರಿದ್ದ ಅಥವಾ ಅವರಿಂದ ವರ್ಗಾವಣೆ ಪಡೆದ ಯಾರೇ ವ್ಯಕ್ತಿಗೆ ಸೇರಿದ ಭೂಮಿಗಳು ಮತ್ತು ಇದು ಅಂಥ ಭೂಮಿಯಲ್ಲಿ ಕಂಡುಬರುವ ಮತ್ತು ಮಾಲೀಕರಿಗೆ ಅಥವಾ ವರ್ಗಾವಣೆ ಪಡೆದವರಿಗೆ ಸೇರಿದ ಎಲ್ಲ ಇತರ ಚರ ಸ್ವತ್ತುಗಳು ಹಾಗೂ ಅದರ ಮೇಲೆ ನಿರ್ಮಿಸಿರುವ ಕಟ್ಟಡಗಳನ್ನು ಒಳಗೊಳ್ಳುತ್ತದೆ;

(ಜಿ) “ಅನುಸೂಚಿ” ಎಂದರೆ ಈ ಅಧಿನಿಯಮದ ಅನುಸೂಚಿ;

(ಎಚ್) “ನಿರ್ದಿಷ್ಟಪಡಿಸಲಾದ ದಿನಾಂಕ” ಎಂದರೆ ಈ ಅಧಿನಿಯಮದ ಯಾವುವೇ ಉಪಬಂಧಗಳ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕ;

(ಐ) “ವರ್ಗಾವಣೆ ಪಡೆದವನು” ಎಂದರೆ ಖನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಯಾವ ಭೂಮಿಯನ್ನು ಮಾಲೀಕರಿಂದ 1991ರ ಜನವರಿ ಒಂದನೇ ದಿನಾಂಕದಂದು ಅಥವಾ ಅನಂತರ ಯಾವ ವ್ಯಕ್ತಿಗೆ ಮಾರಾಟ, ಕೊಡುಗೆ, ಅಡಮಾನ, ಗುತ್ತಿಗೆ ಅಥವಾ ಇತರ ವಿಧಾನದ ಮೂಲಕ ಪರಭಾರೆ ಮಾಡಲಾಗಿದೆಯೋ ಆ ವ್ಯಕ್ತಿ;

(ಜೆ) “ವರ್ಷ” ಎಂದರೆ ಏಪ್ರಿಲ್ ಮೊದಲನೇ ದಿನಾಂಕದಿಂದ ಪ್ರಾರಂಭವಾಗುವ ವರ್ಷ.

## ಅಧ್ಯಾಯ II

## ಎಸ್ಟೇಟಿನ ವರ್ಗಾವಣೆ ಮತ್ತು ನಿಹಿತಗೊಳ್ಳುವಿಕೆ

**3. ರಾಜ್ಯ ಸರ್ಕಾರಕ್ಕೆ ಎಸ್ಟೇಟನ್ನು ವರ್ಗಾಯಿಸುವುದು ಮತ್ತು ಅದರಲ್ಲಿ ನಿಹಿತಗೊಳಿಸುವುದು.-** ಗೊತ್ತುಪಡಿಸಿದ ದಿನಾಂಕದಂದು, ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟು (ಇಲ್ಲಿ ಇನ್ನು ಮುಂದೆ “ಎಸ್ಟೇಟ್” ಎಂದು ಉಲ್ಲೇಖಿತವಾಗುವ) ಮತ್ತು ಎಸ್ಟೇಟಿಗೆ ಸಂಬಂಧಪಟ್ಟಂತೆ ಮಾಲೀಕರು ಮತ್ತು ವರ್ಗಾವಣೆ ಪಡೆದವರು ಹೊಂದಿರುವ ಹಕ್ಕುಗಳು, ಹಕ್ಕುಮೂಲ ಮತ್ತು ಹಿತಾಸಕ್ತಿಯು ಈ ಅಧಿನಿಯಮದ ಕಾರಣದಿಂದಾಗಿ ರಾಜ್ಯ ಸರ್ಕಾರಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಸಂಪೂರ್ಣವಾಗಿ ಅದರಲ್ಲಿ ನಿಹಿತವಾಗತಕ್ಕದ್ದು.

**4. ನಿಹಿತವಾಗುವುದರ ಸಾಮಾನ್ಯ ಪರಿಣಾಮ.-** (1) ಎಸ್ಟೇಟಿನಲ್ಲಿ ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಮಾಲೀಕರು ಅಥವಾ ವರ್ಗಾವಣೆ ಪಡೆದವರ ಒಡೆತನ, ಸ್ವಾಧೀನ, ಅಧಿಕಾರ ಅಥವಾ ನಿಯಂತ್ರಣದಲ್ಲಿದ್ದ ಎಲ್ಲಾ ಆಸ್ತಿಗಳು, ಹಕ್ಕುಗಳು, ಗುತ್ತಿಗೆ ಹಿಡುವಳಿಗಳು, ಅಧಿಕಾರಗಳು, ಪ್ರಾಧಿಕಾರಗಳು ಮತ್ತು ವಿಶೇಷಾಧಿಕಾರಗಳು ಮತ್ತು ಕಟ್ಟಡಗಳು, ಆಭರಣಗಳು, ವರ್ಣಚಿತ್ರಗಳು, ಕಲಾಕೃತಿಗಳೂ ಸೇರಿದಂತೆ ಎಲ್ಲ ಚರ ಮತ್ತು ಸ್ಥಿರ ಸ್ವತ್ತುಗಳು ಮತ್ತು ಅಂಥ ಆಸ್ತಿಯಲ್ಲಿನ ಅಥವಾ ಅದರಿಂದ ಉಂಟಾಗುವ ಎಲ್ಲ ಇತರ ಹಕ್ಕುಗಳು ಮತ್ತು ಹಿತಾಸಕ್ತಿಗಳು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲ ಲೆಕ್ಕ ಪುಸ್ತಕಗಳು, ರಿಜಿಸ್ಟರುಗಳು ಮತ್ತು ಯಾವುದೇ ಸ್ವರೂಪದ ಇತರ ದಸ್ತಾವೇಜುಗಳು ಒಳಗೊಳ್ಳುವುದಾಗಿ ಭಾವಿಸತಕ್ಕದ್ದು.

(2) 3ನೇ ಪ್ರಕರಣದಡಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಮೇಲೆ ಹೇಳಲಾದ ಎಲ್ಲ ಸ್ವತ್ತುಗಳನ್ನು, ಹಾಗೆ ಸರ್ಕಾರದಲ್ಲಿ ನಿಹಿತಗೊಂಡ ಕಾರಣದಿಂದಾಗಿ, ಯಾವುದೇ ಟ್ರಸ್ಟ್, ಬಾಧ್ಯತೆ, ಅಡಮಾನ, ಗುತ್ತಿಗೆ, ಪ್ರಭಾರ, ಧಾರಣಾಧಿಕಾರ ಮತ್ತು ಅವುಗಳಿಗೆ ಬಾಧಕವಾಗುವ ಎಲ್ಲ ಇತರ ಋಣಭಾರಗಳಿಂದ ಬಿಡುಗಡೆ ಮಾಡತಕ್ಕದ್ದು ಮತ್ತು ಮುಕ್ತಗೊಳಿಸತಕ್ಕದ್ದು ಮತ್ತು ಅಂಥ ಸ್ವತ್ತಿನ ಬಳಕೆಯನ್ನು ಯಾವುದೇ ರೀತಿಯಲ್ಲಿ ನಿರ್ಬಂಧಪಡಿಸುವ ಯಾವುದೇ ನ್ಯಾಯಾಲಯದ ಅಥವಾ ಯಾವುದೇ ಪ್ರಾಧಿಕಾರದ ಯಾವುದೇ ಜಪ್ತಿ, ನಿಷೇದಾಜ್ಞೆ ಅಥವಾ ಡಿಕ್ರಿ ಅಥವಾ ಆದೇಶವನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

(3) ಈ ಅಧಿನಿಯಮದಡಿ ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತಿನ ಪ್ರತಿಯೊಬ್ಬ ಅಡಮಾನದಾರ ಮತ್ತು ಅಂಥ ಸ್ವತ್ತಿನಲ್ಲಿ ಅಥವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಪ್ರಭಾರ, ಗುತ್ತಿಗೆ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು ನಿಯಮಿಸಬಹುದಾದಂಥ ಸಮಯದೊಳಗೆ ಮತ್ತು ಅಂಥ ರೀತಿಯಲ್ಲಿ ಅಂಥ ಅಡಮಾನ, ಗುತ್ತಿಗೆ, ಪ್ರಭಾರ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯ ಬಗ್ಗೆ ಕಮಿಷನರಿಗೆ ಮಾಹಿತಿಯನ್ನು ಕೊಡತಕ್ಕದ್ದು.

(4) ಸಂದೇಹಗಳ ನಿವಾರಣೆಗಾಗಿ, (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸ್ವತ್ತಿನ ಅಡಮಾನದಾರ ಅಥವಾ ಅಂಥ ಯಾವುದೇ ಸ್ವತ್ತಿನಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಪ್ರಭಾರ, ಗುತ್ತಿಗೆ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿರುವ ಇತರ ಯಾವೊಬ್ಬ ವ್ಯಕ್ತಿಯು ತನ್ನ ಹಕ್ಕುಗಳು ಮತ್ತು ಹಿತಾಸಕ್ತಿಗೆ ಅನುಸಾರವಾಗಿ 7ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗಿನ ಪೈಕಿ ಮತ್ತು 8ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಲಾದ ಮೊಬಲಗಿನ ಪೈಕಿ ಸಹ ಪೂರ್ಣ ಅಥವಾ ಭಾಗಶಃ ಅಡಮಾನದ ಹಣ ಅಥವಾ ಇತರ ಬಾಕಿಗಳನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ. ಆದರೆ ಅಂಥ ಯಾವುದೇ ಅಡಮಾನ, ಪ್ರಭಾರ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯನ್ನು ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತಿನ ವಿರುದ್ಧ ಜಾರಿಗೊಳಿಸತಕ್ಕದ್ದಲ್ಲ.

(5) ಗೊತ್ತುಪಡಿಸಿದ ದಿನಾಂಕದಂದು, 3ನೇ ಪ್ರಕರಣದಡಿ ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ ಮಾಲೀಕರು ಅಥವಾ ವರ್ಗಾವಣೆ ಪಡೆದವರು ಹೂಡಿದ ಅಥವಾ ಸಲ್ಲಿಸಿದ ಅಥವಾ ಅವರ ವಿರುದ್ಧ ಹೂಡಿದ ಅಥವಾ ಸಲ್ಲಿಸಿದ ಯಾವುದೇ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯು ಇತ್ಯರ್ಥವಾಗದೆ ಉಳಿದಿದ್ದರೆ, ಅದು ಎಸ್ಟೇಟಿನ ವರ್ಗಾವಣೆಯ ಕಾರಣದಿಂದಾಗಿ ಅಥವಾ ಈ ಅಧಿನಿಯಮದಲ್ಲಿರುವ ಯಾವುವೇ ಉಪಬಂಧಗಳ ಕಾರಣದಿಂದಾಗಿ ಕೊನೆಗೊಳ್ಳತಕ್ಕದ್ದಲ್ಲ, ನಿಂತುಹೋಗತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಪ್ರತಿಕೂಲ ಪ್ರಭಾವ ಬೀರತಕ್ಕದ್ದಲ್ಲ. ಆದರೆ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯನ್ನು ರಾಜ್ಯ ಸರ್ಕಾರವು ಅಥವಾ ಅದರ ವಿರುದ್ಧ ಅಥವಾ ಎಸ್ಟೇಟು ಮಂಡಲಿಯಲ್ಲಿ ನಿಹಿತವಾಗತಕ್ಕದ್ದೆಂದು 6ನೇ ಪ್ರಕರಣದಡಿ ನಿರ್ದೇಶಿತವಾಗಿದ್ದರೆ ಮಂಡಲಿಯು ಅಥವಾ ಅದರ ವಿರುದ್ಧ ಮುಂದುವರಿಸಬಹುದು, ಪ್ರಾಸಿಕ್ಯೂಟ್ ಮಾಡಬಹುದು ಮತ್ತು ಜಾರಿಗೊಳಿಸಬಹುದು.

**5. ಕೆಲವು ಪೂರ್ವ ಹೊಣೆಗಾರಿಕೆಗಳಿಗೆ ಮಾಲೀಕರು ಅಥವಾ ವರ್ಗಾವಣೆ ಪಡೆದವರು ಬದ್ಧರಾಗುವುದು.**- (1) ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚಿನ ಯಾವುದೇ ದಿನಾಂಕದಲ್ಲಿ ಎಸ್ಟೇಟಿಗೆ ಸಂಬಂಧಪಟ್ಟಂತೆ ಮಾಲೀಕರು ಅಥವಾ ವರ್ಗಾವಣೆ ಪಡೆದವರು ಹೊಂದಿರುವ ಪ್ರತಿಯೊಂದು ಹೊಣೆಗಾರಿಕೆಯು ಅಂಥ ಮಾಲೀಕರು ಅಥವಾ ಸಂದರ್ಭಾನುಸಾರ ವರ್ಗಾವಣೆ ಪಡೆದವರ ಹೊಣೆಗಾರಿಕೆಯಾಗಿರತಕ್ಕದ್ದು ಮತ್ತು ಅದನ್ನು ಅವರ ವಿರುದ್ಧ ಜಾರಿಗೊಳಿಸತಕ್ಕದ್ದು ಮತ್ತು ರಾಜ್ಯ ಸರ್ಕಾರದ ವಿರುದ್ಧವಾಗಿ ಅಥವಾ 6ನೇ ಪ್ರಕರಣದ ಅಡಿಯಲ್ಲಿ ಎಸ್ಟೇಟನ್ನು ಮಂಡಲಿಯಲ್ಲಿ ನಿಹಿತಗೊಳಿಸಲು ನಿರ್ದೇಶಿಸಲಾಗಿದ್ದಲ್ಲಿ, ಮಂಡಲಿಯ ವಿರುದ್ಧವಾಗಿ ಜಾರಿಗೊಳಿಸತಕ್ಕದ್ದಲ್ಲ.

(2) ಸಂದೇಹಗಳ ನಿವಾರಣೆಗಾಗಿ, ಈ ಮುಂದಿನಂತೆ ಘೋಷಿಸಲಾಗಿದೆ:-

(ಎ) ಈ ಪ್ರಕರಣದಲ್ಲಿ ಅಥವಾ ಅಧಿನಿಯಮದ ಯಾವುದೇ ಇತರ ಪ್ರಕರಣದಲ್ಲಿ ವ್ಯಕ್ತವಾಗಿ ಉಪಬಂಧಿಸಿರುವುದನ್ನುಳಿದು, ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚಿನ ಯಾವುದೇ ಅವಧಿಯ ಸಂಬಂಧದಲ್ಲಿ ಎಸ್ಟೇಟಿಗೆ ಸಂಬಂಧಪಟ್ಟಂತೆ ಮಾಲೀಕರು ಅಥವಾ ವರ್ಗಾವಣೆ ಪಡೆದವರು ಹೊಂದಿರುವ ಯಾವ ಹೊಣೆಗಾರಿಕೆಗೂ ರಾಜ್ಯ ಸರ್ಕಾರವನ್ನು ಅಥವಾ 6ನೇ ಪ್ರಕರಣದ ಅಡಿಯಲ್ಲಿ ಹೊಂದಿರುವ ಎಸ್ಟೇಟು ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದೆಂದು ನಿರ್ದೇಶಿಸಿರುವಲ್ಲಿ ಮಂಡಲಿಯನ್ನು ಜವಾಬ್ದಾರಗೊಳಿಸತಕ್ಕದ್ದಲ್ಲ;

(ಬಿ) ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚೆ ಉದ್ಭವಿಸಿದ ಯಾವುದೇ ವಿಷಯ, ಕ್ಲೇಮು ಅಥವಾ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ವಿವಾದಕ್ಕೆ ಸಂಬಂಧಿಸಿದಂತೆ ಗೊತ್ತುಪಡಿಸಿದ ದಿನಾಂಕದ ತರುವಾಯ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಎಸ್ಟೇಟಿಗೆ ಸಂಬಂಧಿಸಿದಂತೆ ನೀಡುವ ಯಾವುದೇ ಐತೀರ್ಪು, ಡಿಕ್ರಿ ಅಥವಾ ಇತರ ಆಜ್ಞೆಯನ್ನು ರಾಜ್ಯ ಸರ್ಕಾರದ ವಿರುದ್ಧ ಅಥವಾ 6ನೇ ಪ್ರಕರಣದ ಅಡಿ ಎಸ್ಟೇಟು ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದೆಂದು ನಿರ್ದೇಶಿಸಿರುವಲ್ಲಿ ಮಂಡಲಿಯ ವಿರುದ್ಧ ಜಾರಿಗೊಳಿಸತಕ್ಕದ್ದಲ್ಲ.

(ಸಿ) ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಯಾವುದೇ ಉಪಬಂಧವನ್ನು ಉಲ್ಲಂಘಿಸಿ ಮಾಲೀಕರು ಅಥವಾ ವರ್ಗಾವಣೆ ಪಡೆದವರು ವಹಿಸಿಕೊಂಡಿದ್ದ ಯಾವುದೇ ಹೊಣೆಗಾರಿಕೆಗೂ ರಾಜ್ಯ ಸರ್ಕಾರವನ್ನು ಅಥವಾ 6ನೇ ಪ್ರಕರಣದ ಅಡಿಯಲ್ಲಿ ಎಸ್ಟೇಟು ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದೆಂದು ನಿರ್ದೇಶಿಸಿರುವಲ್ಲಿ ಮಂಡಲಿಯನ್ನು ಜವಾಬ್ದಾರಗೊಳಿಸತಕ್ಕದ್ದಲ್ಲ.

**6. ಎಸ್ಟೇಟು, ಮಂಡಲಿಯಲ್ಲಿ ನಿಹಿತಗೊಳ್ಳುವ ಬಗ್ಗೆ ನಿರ್ದೇಶನ ನೀಡಲು ರಾಜ್ಯ ಸರ್ಕಾರದ ಅಧಿಕಾರ.**- (1) 3 ಮತ್ತು 4ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, 3ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿದ್ದ ಎಸ್ಟೇಟು ರಾಜ್ಯ ಸರ್ಕಾರದಲ್ಲಿಯೇ ನಿಹಿತವಾಗಿರುವುದು ಮುಂದುವರಿಯುವುದಕ್ಕೆ ಬದಲಾಗಿ ಗೊತ್ತುಪಡಿಸಿದ ದಿನಾಂಕದಿಂದ ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದೆಂಬುದಾಗಿ ನಿರ್ದೇಶಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಎಸ್ಟೇಟಿಗೆ ಸಂಬಂಧಿಸಿದ ಹಕ್ಕು, ಹಕ್ಕುಮೂಲ ಮತ್ತು ಹಿತಾಸಕ್ತಿಯು ಮಂಡಲಿಯಲ್ಲಿ ನಿಹಿತಗೊಂಡಿದ್ದಲ್ಲಿ, ಮಂಡಲಿಯು ಹಾಗೆ ನಿಹಿತವಾದ ದಿನಾಂಕದಂದು ಮತ್ತು ಅಂದಿನಿಂದ ಅಂಥ ಎಸ್ಟೇಟಿಗೆ ಸಂಬಂಧಿಸಿದಂತೆ ಮಂಡಲಿಯು ಮಾಲೀಕನೆಂಬುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ಹೊಂದಿದ್ದ ಎಲ್ಲ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಹಾಗೆ ನಿಹಿತಗೊಂಡ ದಿನಾಂಕದಂದು ಮತ್ತು ದಿನಾಂಕದಿಂದ ಮಂಡಲಿಯ ಹಕ್ಕುಗಳು ಮತ್ತು ಹೊಣೆಗಾರಿಕೆಗಳಾಗುವುವೆಂದು ಭಾವಿಸತಕ್ಕದ್ದು.

**7. ಮಾಲೀಕರು, ವರ್ಗಾವಣೆ ಪಡೆದವರು ಅಥವಾ ಇತರ ಹಿತಾಸಕ್ತ ವ್ಯಕ್ತಿಗಳಿಗೆ ನೀಡಬೇಕಾದ ಮೊಬಲಗು.**- 3ನೇ ಪ್ರಕರಣದ ಅಡಿಯಲ್ಲಿ ಎಸ್ಟೇಟು ಮತ್ತು ಎಸ್ಟೇಟಿಗೆ ಸಂಬಂಧಿಸಿದ ಹಕ್ಕು, ಹಕ್ಕುಮೂಲ ಮತ್ತು ಹಿತಾಸಕ್ತಿಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಿ ಅದರಲ್ಲಿ ನಿಹಿತಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು, ಐದು ನೂರು ಲಕ್ಷ ರೂಪಾಯಿಗಳನ್ನು ಕಮೀಷನರ ಹೆಸರಿನಲ್ಲಿ ಠೇವಣಿ ಇಡುವ ಮೂಲಕ ಸಂದಾಯ ಮಾಡತಕ್ಕದ್ದು ಮತ್ತು ಸದರಿ ಮೊಬಲಗನ್ನು 4ನೇ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ, ಅದರ ಸಂಬಂಧದಲ್ಲಿ ಹಕ್ಕುಳ್ಳವರಾದ ಮಾಲೀಕರು, ವರ್ಗಾವಣೆ ಪಡೆದವರು ಮತ್ತು ಅಂಥ ಇತರ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದು.

**8. ಹೆಚ್ಚಿನ ಮೊಬಲಗುಗಳ ಸಂದಾಯ.**- (1) 7ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗಿಗೆ, ಗೊತ್ತುಪಡಿಸಿದ ದಿನಾಂಕದಿಂದ ಪ್ರಾರಂಭವಾಗಿ ರಾಜ್ಯ ಸರ್ಕಾರವು ಕಮೀಷನರಿಗೆ ಆ ಮೊಬಲಗನ್ನು ಸಂದಾಯ ಮಾಡುವ ದಿನಾಂಕದಂದು ಮುಕ್ತಾಯವಾಗುವ ಅವಧಿಗೆ ವರ್ಷಕ್ಕೆ ಶೇಕಡ ನಾಲ್ಕರ ದರದಲ್ಲಿ ಸರಳ ಬಡ್ಡಿಯನ್ನು ನೀಡತಕ್ಕದ್ದು.

(2) 7ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊಬಲಗಿನ ಜೊತೆಗೆ (1)ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರವಾಗಿ ನಿರ್ಧರಿಸಲಾದ ಮೊಬಲಗನ್ನು ರಾಜ್ಯ ಸರ್ಕಾರವು ಮಾಲೀಕರಿಗೆ, ವರ್ಗಾವಣೆ ಪಡೆದವರಿಗೆ ಅಥವಾ ಸಂದರ್ಭಾನುಸಾರ ಅದಕ್ಕೆ ಹಕ್ಕುಳ್ಳವರಾದಂಥ ಇತರ ವ್ಯಕ್ತಿಗಳಿಗೆ ನೀಡತಕ್ಕದ್ದು.

(3) ಸಂದೇಹಗಳ ನಿವಾರಣೆಗೆ, 3ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಎಸ್ಟೇಟಿಗೆ ಸಂಬಂಧಪಟ್ಟಂತೆ ಮಾಲೀಕರು ಅಥವಾ ವರ್ಗಾವಣೆ ಪಡೆದವರು ಹೊಂದಿರುವ ಹೊಣೆಗಾರಿಕೆಯನ್ನು 7ನೇ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಮೊಬಲಗಿನಿಂದ ಮತ್ತು (1)ನೇ ಉಪ-ಪ್ರಕರಣದಡಿಯಲ್ಲಿ ನಿರ್ಧರಿಸಲಾದ ಮೊಬಲಗುಗಳಿಂದಲೂ ಸಹ, ಸಂದರ್ಭಾನುಸಾರ ಮಾಲೀಕರು ಅಥವಾ ವರ್ಗಾವಣೆ ಪಡೆದವರ ಸಾಲಗಾರರ ಹಕ್ಕುಗಳು ಮತ್ತು ಹಿತಾಸಕ್ತಿಗಳಿಗೆ ಅನುಸಾರವಾಗಿ ಬಿಡುಗಡೆ ಮಾಡತಕ್ಕದ್ದು ಎಂದು ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ III

## ಎಸ್ಟೇಟಿನ ನಿರ್ವಹಣೆ

**9. ಎಸ್ಟೇಟಿನ ನಿರ್ವಹಣೆ.-** 3ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವಂಥ ಎಸ್ಟೇಟಿನ ಸಾಮಾನ್ಯ ಮೇಲ್ವಿಚಾರಣೆ, ನಿರ್ದೇಶನ, ನಿಯಂತ್ರಣ ಮತ್ತು ನಿರ್ವಹಣೆ ಮತ್ತು ಎಸ್ಟೇಟಿನ ಸಂಬಂಧದಲ್ಲಿನ ಹಕ್ಕು, ಹಕ್ಕುಮೂಲ ಮತ್ತು ಹಿತಾಸಕ್ತಿಯು 6ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ನಿರ್ದೇಶನ ನೀಡಿರುವಲ್ಲಿ ಮಂಡಲಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಆ ತರುವಾಯ ಎಲ್ಲ ಇತರ ವ್ಯಕ್ತಿಗಳನ್ನು ಹೊರತುಪಡಿಸಿ, ಎಸ್ಟೇಟಿನ ಸಂಬಂಧದಲ್ಲಿ ಯಾವ ಅಧಿಕಾರಗಳನ್ನು ಚಲಾಯಿಸಲು ಮತ್ತು ಯಾವ ಕೃತ್ಯಗಳನ್ನು ಮಾಡಲು ಮಂಡಲಿಯನ್ನು ಪ್ರಾಧಿಕೃತಗೊಳಿಸಿದೆಯೋ ಅಂಥ ಎಲ್ಲಾ ಅಧಿಕಾರಗಳನ್ನು ಚಲಾಯಿಸಲು ಮತ್ತು ಅಂಥ ಎಲ್ಲ ಕೃತ್ಯಗಳನ್ನು ಮಾಡಲು ಮಂಡಲಿಗೆ ಹಕ್ಕು ಇರತಕ್ಕದ್ದು.

**10. ಎಸ್ಟೇಟಿನ ನಿರ್ವಹಣೆಯ ಪ್ರಭಾರದಲ್ಲಿರುವ ವ್ಯಕ್ತಿಗಳ ಕರ್ತವ್ಯಗಳು.-** (1) ಮಂಡಲಿಯಲ್ಲಿ ಎಸ್ಟೇಟಿನ ನಿರ್ವಹಣೆಯು ನಿಹಿತವಾದ ಮೇಲೆ ಹಾಗೆ ನಿಹಿತವಾಗುವುದಕ್ಕೆ ನಿಕಟ ಪೂರ್ವದಲ್ಲಿ ಎಸ್ಟೇಟಿನ ನಿರ್ವಹಣೆಯ ಪ್ರಭಾರದಲ್ಲಿದ್ದ ಎಲ್ಲ ವ್ಯಕ್ತಿಗಳು ಎಸ್ಟೇಟಿನ ಸಂಬಂಧದಲ್ಲಿ ಅವರ ವಶದಲ್ಲಿರುವ ಎಲ್ಲ ಆಸ್ತಿಗಳು, ಲೆಕ್ಕದ ಪುಸ್ತಕಗಳು, ರಿಜಿಸ್ಟರುಗಳು ಅಥವಾ ಇತರ ದಸ್ತಾವೇಜುಗಳನ್ನು ಮಂಡಲಿಗೆ ಕೊಡಲು ಬದ್ಧರಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು ಯಾವುದೇ ವಿಷಯದ ಸಂಬಂಧದಲ್ಲಿ ತನಗೆ ಅಪೇಕ್ಷಣೀಯವೆಂದು ಕಂಡುಬರುವಂಥ ನಿರ್ದೇಶನಗಳನ್ನು ಮಂಡಲಿಗೆ ನೀಡಬಹುದು ಮತ್ತು ಮಂಡಲಿಯೂ ಸಹ ಎಸ್ಟೇಟಿನ ನಿರ್ವಹಣೆಯ ಸಮಯದಲ್ಲಿ ಉದ್ಭವಿಸುವ ಇತರ ಯಾವುದೇ ವಿಷಯದ ಸಂಬಂಧದಲ್ಲಿ ಅಂಥ ನಿರ್ವಹಣೆಯನ್ನು ಯಾವ ರೀತಿಯಲ್ಲಿ ಕೈಗೊಳ್ಳಬೇಕೆಂಬ ಬಗ್ಗೆ ಸೂಚನೆಗಳಿಗಾಗಿ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸುವುದು ತನಗೆ ಅಗತ್ಯವೆಂದು ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಹಾಗೆ ಅರ್ಜಿ ಸಲ್ಲಿಸಬಹುದು.

**11. ತಮ್ಮ ಸ್ವಾಧೀನದಲ್ಲಿರುವ ಆಸ್ತಿಗಳ ಲೆಕ್ಕ ಕೊಡಲು ವ್ಯಕ್ತಿಗಳ ಕರ್ತವ್ಯ.-** (1) ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ಅಥವಾ ಮಂಡಲಿಯಲ್ಲಿ ನಿಹಿತವಾಗಿರುವಂಥ ಮತ್ತು ಮಾಲೀಕರು ಅಥವಾ ವರ್ಗಾವಣೆ ಪಡೆದವರಿಗೆ ಸೇರಿದ ಅಥವಾ ಎಸ್ಟೇಟು ರಾಜ್ಯ ಸರ್ಕಾರ ಅಥವಾ ಮಂಡಲಿಯಲ್ಲಿ ನಿಹಿತವಾಗಿರದಿದ್ದರೆ ಹಾಗೆ ಸೇರುತ್ತಿದ್ದ ಆ ಎಸ್ಟೇಟಿಗೆ ಸಂಬಂಧಿಸಿದ ಯಾವುವೇ ಆಸ್ತಿಗಳು, ಪುಸ್ತಕಗಳು, ದಸ್ತಾವೇಜುಗಳು ಮತ್ತು ಇತರ ಕಾಗದ ಪತ್ರಗಳನ್ನು ಗೊತ್ತುಪಡಿಸಿದ ದಿನಾಂಕದಂದು ತನ್ನ ಸ್ವಾಧೀನತೆಯಲ್ಲಿ ಅಥವಾ ನಿಯಂತ್ರಣದಲ್ಲಿ ಹೊಂದಿರುವ ವ್ಯಕ್ತಿಯು, ರಾಜ್ಯ ಸರ್ಕಾರಕ್ಕೆ ಅಥವಾ ಮಂಡಲಿಗೆ ಅಥವಾ ರಾಜ್ಯ ಸರ್ಕಾರ ಅಥವಾ ಮಂಡಲಿಯು ಈ ಪರವಾಗಿ ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸದರಿ ಆಸ್ತಿಗಳು, ಪುಸ್ತಕಗಳು, ದಸ್ತಾವೇಜುಗಳು ಮತ್ತು ಇತರ ಕಾಗದ ಪತ್ರಗಳ ಬಗ್ಗೆ ಲೆಕ್ಕ ನೀಡಲು ಬದ್ಧನಾಗಿರತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರ ಅಥವಾ ಮಂಡಲಿಯಲ್ಲಿ ನಿಹಿತವಾಗಿರುವ ಎಸ್ಟೇಟಿನ ಸ್ವಾಧೀನತೆಯನ್ನು ಪಡೆಯುವುದಕ್ಕೆ ಅವಶ್ಯಕವಾದ ಎಲ್ಲ ಕ್ರಮಗಳನ್ನು ರಾಜ್ಯ ಸರ್ಕಾರ ಅಥವಾ ಮಂಡಲಿಯು ಕೈಗೊಳ್ಳಬಹುದು ಅಥವಾ ಕೈಗೊಳ್ಳುವಂತೆ ಮಾಡಬಹುದು.

(3) 3ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಎಸ್ಟೇಟಿಗೆ ಸಂಬಂಧಿಸಿದಂತೆ, ಗೊತ್ತುಪಡಿಸಿದ ದಿನಾಂಕದಂದು ಇದ್ದಂತೆ ಎಲ್ಲಾ ಆಸ್ತಿ ಮತ್ತು ಸ್ವತ್ತುಗಳ ಪೂರ್ಣ ಆಸ್ತಿ ಪಟ್ಟಿಯನ್ನು ರಾಜ್ಯ ಸರ್ಕಾರವು ಈ ಪರವಾಗಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ, ಮಾಲೀಕರು ಅಥವಾ ಸಂದರ್ಭಾನುಸಾರ ವರ್ಗಾವಣೆ ಪಡೆದವರು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದ್ದು. ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರ ಅಥವಾ ಮಂಡಲಿಯು, ಮಾಲೀಕರು ಅಥವಾ ವರ್ಗಾವಣೆ ಪಡೆದವರಿಗೆ ಯುಕ್ತವಾದ ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು.

## ಅಧ್ಯಾಯ IV

## ಹಣ ಸಂದಾಯದ ಕಮೀಷನರು

**12. ಹಣ ಸಂದಾಯದ ಕಮೀಷನರ ನೇಮಕ.–** (1) 7 ಮತ್ತು 8ನೇ ಪ್ರಕರಣಗಳ ಅಡಿಯಲ್ಲಿ ಸಂದಾಯ ಮಾಡಬಹುದಾದ ಮೊಬಲಗಿನ ಹಂಚಿಕೆಯ ಉದ್ದೇಶಕ್ಕಾಗಿ ರಾಜ್ಯಪತ್ರದಲ್ಲಿ ಅಧಿಸೂಚನೆ ನೀಡುವ ಮೂಲಕ ರಾಜ್ಯ ಸರ್ಕಾರವು ಹಣ ಸಂದಾಯದ ಕಮೀಷನರನ್ನು ನೇಮಕ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು ಕಮೀಷನರಿಗೆ ಸಹಾಯ ಮಾಡಲು ತಾನು ಯುಕ್ತವೆಂದು ಭಾವಿಸುವಂಥ ಇತರ ವ್ಯಕ್ತಿಗಳನ್ನು ಸಹ ನೇಮಕ ಮಾಡಬಹುದು. ಆ ತರುವಾಯ ಕಮೀಷನರು ಈ ಅಧಿನಿಯಮದ ಅಡಿಯಲ್ಲಿ ತಾನು ಚಲಾಯಿಸಬಹುದಾದ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸಲು ಅಂಥ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ಪ್ರಾಧಿಕೃತಗೊಳಿಸಬಹುದು ಮತ್ತು ಬೇರೆ ಬೇರೆ ಅಧಿಕಾರಗಳನ್ನು ಚಲಾಯಿಸಲು ಬೇರೆ ಬೇರೆ ವ್ಯಕ್ತಿಗಳನ್ನು ಪ್ರಾಧಿಕೃತಗೊಳಿಸಬಹುದು.

(3) ಕಮಿಷನರು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಚಲಾಯಿಸಲು ಕಮೀಷನರಿಂದ ಪ್ರಾಧಿಕೃತನಾದ ಯಾರೇ ವ್ಯಕ್ತಿಯು, ಆ ಅಧಿಕಾರಗಳು ಪ್ರಾಧಿಕೃತಗೊಳಿಸುವ ಮೂಲಕವಲ್ಲದೆ ಈ ಅಧಿನಿಯಮದ ಅಡಿಯಲ್ಲಿ ನೇರವಾಗಿ ಆ ವ್ಯಕ್ತಿಗೆ ಪ್ರದತ್ತವಾಗಿದ್ದರೆ ಅಧಿಕಾರಗಳನ್ನು ಚಲಾಯಿಸಬಹುದಾಗಿದ್ದ ರೀತಿಯಲ್ಲಿ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ಚಲಾಯಿಸತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಕಮೀಷನರ ಮತ್ತು ಇತರ ವ್ಯಕ್ತಿಗಳ ವೇತನಗಳು ಮತ್ತು ಭತ್ಯೆಗಳನ್ನು ರಾಜ್ಯದ ಸಂಚಿತ ನಿಧಿಯಿಂದ ಭರಿಸತಕ್ಕದ್ದು.

**13. ಕಮೀಷನರಿಗೆ ರಾಜ್ಯ ಸರ್ಕಾರದಿಂದ ಹಣ ಸಂದಾಯ.–** (1) ರಾಜ್ಯ ಸರ್ಕಾರವು ಗೊತ್ತುಪಡಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಮಾಲೀಕರಿಗೆ ಅಥವಾ ವರ್ಗಾವಣೆ ಪಡೆದವರಿಗೆ ಮತ್ತು ಇತರ ಹಿತಾಸಕ್ತ ವ್ಯಕ್ತಿಗಳಿಗೆ ಹಣ ಸಂದಾಯ ಮಾಡುವುದಕ್ಕಾಗಿ ಕಮೀಷನರ ಬಳಿ,–

(ಎ) 7ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೊಬಲಗಿಗೆ ಸಮನಾದ ಮೊಬಲಗನ್ನು; ಮತ್ತು

(ಬಿ) 8ನೇ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬಹುದಾದ ಮೊಬಲಗಿಗೆ ಸಮನಾದ ಮೊಬಲಗನ್ನು,

–ನಗದು ರೂಪದಲ್ಲಿ ಠೇವಣಿ ಇಡತಕ್ಕದ್ದು.

(2) ರಾಜ್ಯ ಸರ್ಕಾರವು ಕಮೀಷನರ ಹೆಸರಿನಲ್ಲಿ ರಾಜ್ಯದ ಸಾರ್ವಜನಿಕ ಲೆಕ್ಕದಲ್ಲಿ ಒಂದು ಠೇವಣಿ ಖಾತೆಯನ್ನು ತೆರೆಯತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಕಮೀಷನರಿಗೆ ಸಂದಾಯ ಮಾಡಿದ ಪ್ರತಿಯೊಂದು ಮೊಬಲಗನ್ನು ಅವನ ಠೇವಣಿ ಖಾತೆಗೆ ಜಮಾ ಮಾಡತಕ್ಕದ್ದು ಮತ್ತು ಸದರಿ ಠೇವಣಿ ಖಾತೆಯನ್ನು ಕಮೀಷನರು ನಿರ್ವಹಿಸತಕ್ಕದ್ದು.

(3) ಕಮೀಷನರು, ಈ ಅಧಿನಿಯಮದ ಅಡಿಯಲ್ಲಿ ಅವನಿಗೆ ಯಾವ ಎಸ್ಟೇಟಿನ ಬಗ್ಗೆ ಹಣ ಸಂದಾಯ ಮಾಡಲಾಯಿತೋ, ಆ ಎಸ್ಟೇಟಿನ ಸಂಬಂಧದಲ್ಲಿ ದಾಖಲೆಗಳನ್ನು ಇಟ್ಟುಕೊಂಡಿರತಕ್ಕದ್ದು.

(4) (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಠೇವಣಿ ಖಾತೆಗೆ ಜಮಾ ಆದ ಹಣದ ಮೊಬಲಗಿನ ಮೇಲಿನ ಬಡ್ಡಿಯು ಮಾಲೀಕರ, ವರ್ಗಾವಣೆ ಪಡೆದವರ ಅಥವಾ ಇತರ ಹಿತಾಸಕ್ತ ವ್ಯಕ್ತಿಗಳ ಪ್ರಯೋಜನಕ್ಕಾಗಿ ಪ್ರಾಪ್ತವಾಗತಕ್ಕದ್ದು.

**14. ರಾಜ್ಯ ಸರ್ಕಾರದ ಮತ್ತು ಮಂಡಲಿಯ ನಿರ್ದಿಷ್ಟ ಅಧಿಕಾರಗಳು.**- (1) ರಾಜ್ಯ ಸರ್ಕಾರ ಅಥವಾ ಮಂಡಲಿಯಲ್ಲಿ ನಿಹಿತವಾಗಿರುವ ಎಸ್ಟೇಟಿನ ಸಂಬಂಧದಲ್ಲಿ ಬಾಕಿ ಇರುವ ಮತ್ತು ಗೊತ್ತುಪಡಿಸಿದ ದಿನಾಂಕದ ನಂತರ ಬಿಡುಗಡೆಯಾದ ಯಾವುದೇ ಮೊಬಲಗನ್ನು ಹಾಗೆ ಬಿಡುಗಡೆಯಾದ ಮೊಬಲಗು ಗೊತ್ತುಪಡಿಸಿದ ದಿನಾಂಕದ ಹಿಂದಿನ ಅವಧಿಗೆ ಸಂಬಂಧಪಟ್ಟಿದ್ದರೂ ಸಹ, ಗೊತ್ತುಪಡಿಸಿದ ದಿನಾಂಕದವರೆಗೆ ಸ್ವೀಕರಿಸುವ ಹಕ್ಕು, ಇತರ ಎಲ್ಲಾ ವ್ಯಕ್ತಿಗಳನ್ನು ಹೊರತುಪಡಿಸಿ, ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ ಮಂಡಲಿಗೆ ಇರತಕ್ಕದ್ದು.

(2) ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ ಮಂಡಲಿಯು ಗೊತ್ತುಪಡಿಸಿದ ದಿನಾಂಕಕ್ಕಿಂತಲೂ ಹಿಂದಿನ ಅವಧಿಗೆ ಸಂಬಂದಿಸಿದಂತೆ ಮಾಲೀಕರು ಅಥವಾ ವರ್ಗಾವಣೆ ಪಡೆದವರ ಎಸ್ಟೇಟಿಗೆ ಸಂಬಂಧಿಸಿದ ಹೊಣೆಗಾರಿಕೆಯನ್ನು ಮುಕ್ತಗೊಳಿಸುವುದಕ್ಕಾಗಿ ಗೊತ್ತುಪಡಿಸಿದ ದಿನಾಂಕದ ನಂತರ ಮಾಡಿದ ಪ್ರತಿಯೊಂದು ಸಂದಾಯದ ಬಗ್ಗೆ ರಾಜ್ಯ ಸರ್ಕಾರ ಅಥವಾ ಮಂಡಲಿಯು ಕಮೀಷನರಿಗೆ ಕ್ಲೇಮು ಸಲ್ಲಿಸಬಹುದು. ಅಂಥ ಕ್ಲೇಮುಗಳ ಆದ್ಯತೆಯು, ರಾಜ್ಯ ಸರ್ಕಾರ ಅಥವಾ ಮಂಡಲಿಯು ಮುಕ್ತಗೊಳಿಸಿದ ಅಂಥ ಹೊಣೆಗಾರಿಕೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಈ ಅಧಿನಿಯಮದ ಅಡಿಯಲ್ಲಿ ನೀಡಲಾದ ಆದ್ಯತೆಗಳಿಗನುಸಾರವಾಗಿ ಇರತಕ್ಕದ್ದು.

(3) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಮುಕ್ತಗೊಳಿಸಿಲ್ಲದ, ಗೊತ್ತುಪಡಿಸಿದ ದಿನಾಂಕಕ್ಕೆ ಹಿಂದಿನ ಯಾವುವೇ ವ್ಯವಹಾರಗಳ ಬಗ್ಗೆ ಎಸ್ಟೇಟಿಗೆ ಸಂಬಂಧಪಟ್ಟಂತೆ ಮಾಲೀಕರ ಅಥವಾ ವರ್ಗಾವಣೆ ಪಡೆದವರ ಹೊಣೆಗಾರಿಕೆಗಳು ಮಾಲೀಕರ ಅಥವಾ ಸಂದರ್ಭಾನುಸಾರ ವರ್ಗಾವಣೆ ಪಡೆದವರ ಹೊಣೆಗಾರಿಕೆಗಳಾಗಿರತಕ್ಕದ್ದು.

**15. ಕ್ಲೇಮುಗಳನ್ನು ಕಮೀಷನರಿಗೆ ಸಲ್ಲಿಸತಕ್ಕದ್ದು.**- ಗೊತ್ತುಪಡಿಸಿದ ದಿನಾಂಕಕ್ಕೂ ಮೊದಲು ಎಸ್ಟೇಟಿಗೆ ಸಂಬಂಧಿಸಿದಂತೆ ಅನುಸೂಚಿ-IIರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯದ ಬಗ್ಗೆ ಕ್ಲೇಮು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಗೊತ್ತುಪಡಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕಮೀಷನರಿಗೆ ಕ್ಲೇಮನ್ನು ಸಲ್ಲಿಸತಕ್ಕದ್ದು:

ಪರಂತು, ಕ್ಲೇಮುದಾರನಿಗೆ ಸದರಿ ಮೂವತ್ತು ದಿನಗಳ ಅವಧಿಯೊಳಗಾಗಿ ಯುಕ್ತ ಕಾರಣಗಳಿಂದಾಗಿ ಕ್ಲೇಮನ್ನು ಸಲ್ಲಿಸಲು ಸಾಧ್ಯವಾಗಲಿಲ್ಲವೆಂದು ಕಮೀಷನರಿಗೆ ಮನವರಿಕೆಯಾದರೆ, ಅವನು ಮತ್ತೆ ಮೂವತ್ತು ದಿನಗಳ ಅವಧಿಯವರೆಗೆ ಕ್ಲೇಮನ್ನು ಸ್ವೀಕರಿಸಬಹುದು. ಆದರೆ ಆನಂತರ ಸ್ವೀಕರಿಸತಕ್ಕದ್ದಲ್ಲ.

**16. ಕ್ಲೇಮುಗಳ ಆದ್ಯತೆ.**- 15ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಕ್ಲೇಮುಗಳ ಆದ್ಯತೆಯು ಈ ಮುಂದಿನ ತತ್ವಗಳಿಗೆ ಅನುಸಾರವಾಗಿರತಕ್ಕದ್ದು, ಎಂದರೆ:

(ಎ) ಪ್ರವರ್ಗ Iಕ್ಕೆ ಇತರ ಎಲ್ಲ ಪ್ರವರ್ಗಗಳಿಗಿಂತ ಹೆಚ್ಚಿನ ಆದ್ಯತೆಯಿರತಕ್ಕದ್ದು ಮತ್ತು ಪ್ರವರ್ಗ IIಕ್ಕೆ ಪ್ರವರ್ಗ IIIIಕ್ಕಿಂತ ಹೆಚ್ಚಿನ ಆದ್ಯತೆಯಿರತಕ್ಕದ್ದು ಮತ್ತು ಇದೇ ರೀತಿ ಉಳಿದವುಗಳು ಇರತಕ್ಕದ್ದು.

(ಬಿ) ಪ್ರತಿಯೊಂದು ಪ್ರವರ್ಗದಲ್ಲಿ ನಿರ್ದಿಷ್ಟಪಡಿಸಿದ ಕ್ಲೇಮುಗಳು ಸಮಾನವಾದ ಮಟ್ಟದವುಗಳಾಗಿರತಕ್ಕದ್ದು ಮತ್ತು ಅವುಗಳನ್ನು ಪೂರ್ಣವಾಗಿ ಸಂದಾಯ ಮಾಡತಕ್ಕದ್ದು, ಆದರೆ ಕ್ಲೇಮುಗಳನ್ನು ಪೂರ್ಣವಾಗಿ ಸಂದಾಯ

ಮಾಡಲು ಸಾಕಾಗುವಷ್ಟು ಮೊಬಲಗು ಇಲ್ಲದಿರುವಲ್ಲಿ ಅವುಗಳನ್ನು ಸಮವಾದ ಪ್ರಮಾಣದಲ್ಲಿ ಹಂಚಿಕೆ ಮಾಡತಕ್ಕದ್ದು ಮತ್ತು ಅದಕ್ಕನುಸಾರವಾಗಿ ಸಂದಾಯ ಮಾಡತಕ್ಕದ್ದು, ಮತ್ತು

(ಸಿ) ಕೆಳಗಿನ ಪ್ರವರ್ಗಗಳಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ಮುಕ್ತಗೊಳಿಸುವ ಪ್ರಶ್ನೆಯು, ಅದಕ್ಕೆ ನಿಕಟ ಉನ್ನತ ಪ್ರವರ್ಗಗಳಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ಭರಿಸಿದ ನಂತರವೂ ಹೆಚ್ಚುವರಿ ಮೊಬಲಗು ಉಳಿದಲ್ಲಿ ಮಾತ್ರವೇ ಉದ್ಭವಿಸತಕ್ಕದ್ದು.

**17. ಕ್ಲೇಮುಗಳ ಪರಿಶೀಲನೆ.-** (1) 15ನೇ ಪ್ರಕರಣದ ಅಡಿಯಲ್ಲಿ ಕ್ಲೇಮುಗಳನ್ನು ಸ್ವೀಕರಿಸಿದ ನಂತರ ಕಮೀಷನರು ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಆದ್ಯತೆಗಳ ಕ್ರಮಕ್ಕನುಸಾರವಾಗಿ ಕ್ಲೇಮುಗಳನ್ನು ಪಟ್ಟಿ ಮಾಡತಕ್ಕದ್ದು ಮತ್ತು ಅಂಥ ಆದ್ಯತೆಯ ಕ್ರಮಕ್ಕನುಸಾರವಾಗಿ ಅವುಗಳನ್ನು ಪರಿಶೀಲಿಸತಕ್ಕದ್ದು.

(2) ಕ್ಲೇಮುಗಳ ಪರಿಶೀಲನೆ ಮಾಡಿದಾಗ, ಈ ಅಧಿನಿಯಮದ ಅಡಿಯಲ್ಲಿ ಕಮೀಷನರಿಗೆ ಸಂದಾಯ ಮಾಡಿದ ಮೊಬಲಗು ಯಾವುದೇ ಕೆಳಗಿನ ಪ್ರವರ್ಗಗಳಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ಭರಿಸಲು ಸಾಕಾಗುವಷ್ಟು ಇಲ್ಲವೆಂದು ಅವನು ಅಭಿಪ್ರಾಯಪಟ್ಟಲ್ಲಿ, ಅಂಥ ಪ್ರವರ್ಗಕ್ಕೆ ಸಂಬಂಧಿಸಿದ ಕ್ಲೇಮುಗಳನ್ನು ಪರಿಶೀಲಿಸುವುದು ಅಗತ್ಯವಾಗಿರತಕ್ಕದ್ದಲ್ಲ.

**18. ಕ್ಲೇಮುಗಳ ಅಂಗೀಕಾರ ಅಥವಾ ನಿರಾಕರಣೆ.-**(1) IIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಆದ್ಯತೆಗಳಿಗನುಗುಣವಾಗಿ ಕ್ಲೇಮುಗಳನ್ನು ಪರಿಶೀಲಿಸಿದ ನಂತರ ಕಮೀಷನರು ಪ್ರತಿಯೊಬ್ಬ ಕ್ಲೇಮುದಾರನು ತನ್ನ ಕ್ಲೇಮಿನ ಬಗ್ಗೆ ರುಜುವಾತನ್ನು ಯಾವ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಸಲ್ಲಿಸಬೇಕೋ ಆ ದಿನಾಂಕವನ್ನು ನಿಗದಿಪಡಿಸತಕ್ಕದ್ದು.

(2) ಹಾಗೆ ನಿಗದಿಪಡಿಸಿದ ದಿನಾಂಕದ ನೋಟೀಸನ್ನು, ಹದಿನಾಲ್ಕು ದಿನಗಳಿಗೆ ಕಡಿಮೆ ಇಲ್ಲದಷ್ಟು ಮುಂಚಿತವಾಗಿ ದೇಶದಲ್ಲಿ ವ್ಯಾಪಕ ಪ್ರಸಾರವಿರುವ ಇಂಗ್ಲೀಷ್ ಭಾಷೆಯ ದಿನಪತ್ರಿಕೆಯೊಂದರಲ್ಲಿ ಮತ್ತು ರಾಜ್ಯದಲ್ಲಿ ವ್ಯಾಪಕ ಪ್ರಸಾರವುಳ್ಳ ಕನ್ನಡ ಭಾಷೆಯ ದಿನಪತ್ರಿಕೆಯೊಂದರಲ್ಲಿ ಜಾಹೀರಾತಿನ ಮೂಲಕ ನೀಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ನೋಟೀಸಿನಲ್ಲಿ, ಕ್ಲೇಮುದಾರನಿಗೆ ಜಾಹೀರಾತಿನಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಕಮೀಷನರಲ್ಲಿ ತನ್ನ ಕ್ಲೇಮಿನ ರುಜುವಾತು ಸಲ್ಲಿಸಲು ಕರೆ ನೀಡತಕ್ಕದ್ದು.

(3) ಕಮೀಷನರು ನಿರ್ದಿಷ್ಟಪಡಿಸಿದ ಸಮಯದೊಳಗೆ ರುಜುವಾತನ್ನು ಸಲ್ಲಿಸಲು ತಪ್ಪಿದ ಪ್ರತಿಯೊಬ್ಬ ಕ್ಲೇಮುದಾರನನ್ನು, ಕಮೀಷನರು ಮಾಡುವ ಹಂಚಿಕೆಯಿಂದ ಹೊರತುಪಡಿಸತಕ್ಕದ್ದು.

(4) ಕಮಿೂಷನರು ತಾನು ಅವಶ್ಯಕವೆಂದು ಅಭಿಪ್ರಾಯಪಡುವಂಥ ತನಿಖೆಯನ್ನು ನಡೆಸಿದ ನಂತರ ಮತ್ತು ಕ್ಲೇಮುದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ ಅಂಥ ಕ್ಲೇಮುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸತಕ್ಕದ್ದು ಮತ್ತು ಲಿಖಿತ ಆದೇಶದ ಮೂಲಕ ಕ್ಲೇಮನ್ನು ಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸಬಹುದು

ಅಥವಾ ನಿರಾಕರಿಸಬಹುದು. ಮೊಬಲಗನ್ನು ಸ್ವೀಕರಿಸಲು ಯಾವ ವ್ಯಕ್ತಿ ಅಥವಾ ವ್ಯಕ್ತಿಗಳು ಹಕ್ಕುಳ್ಳವರಾಗಿರುವರೆಂಬ ಬಗೆಗಿನ ವಿವಾದವನ್ನು ಮತ್ತು ಯಾವನೇ ಮೃತ ಕ್ಲೇಮುದಾರನ ಕಾನೂನುಸಮ್ಮತ ಪ್ರತಿನಿಧಿ ಯಾರೆಂಬ ಬಗೆಗಿನ ವಿವಾದವನ್ನು ಸಹ ಕಮಿೂಷನರು ನಿರ್ಧರಿಸತಕ್ಕದ್ದು.

(5) ಕಮಿೂಷನರು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಉದ್ಭವಿಸುವ ಎಲ್ಲ ವಿಷಯಗಳ ಬಗ್ಗೆ ತನ್ನದೇ ಕಾರ್ಯವಿಧಾನವನ್ನು ನಿಯಂತ್ರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ, ಯಾವುದೇ ತನಿಖೆಯನ್ನು ನಡೆಸುವ ಉದ್ದೇಶಕ್ಕಾಗಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿ ದಾವೆಯ ವಿಚಾರಣೆ ನಡೆಸುವ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವ ಎಲ್ಲ ಅಧಿಕಾರಗಳನ್ನೂ ಹೊಂದಿರತಕ್ಕದ್ದು ಎಂದರೆ: -

(ಎ) ಯಾವೊಬ್ಬ ಸಾಕ್ಷಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಅಗತ್ಯಪಡಿಸುವುದು ಮತ್ತು ಪ್ರಮಾಣ ಮಾಡಿಸುವ ಮೂಲಕ ಅವನನ್ನು ವಿಚಾರಣೆಗೊಳಪಡಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಕಂಡುಹಿಡಿಯುವುದು ಮತ್ತು ಹಾಜರುಪಡಿಸುವುದು;

(ಸಿ) ಅಫಿಡವಿಟ್ಟಿನ ಮೂಲಕ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಸಾಕ್ಷಿಗಳ ವಿಚಾರಣೆಗಾಗಿ ಕಮಿಷನನ್ನು ಹೊರಡಿಸುವುದು.

(6) ಕಮಿಷನರ ಮುಂದಿರುವ ಯಾವುದೇ ತನಿಖೆಯು, ದಂಡ ಸಂಹಿತೆಯ 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು ಮತ್ತು ಕಮಿಷನರನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ 195ನೇ ಪ್ರಕರಣ ಮತ್ತು ಘಘಗಿಖನೇ ಅಧ್ಯಾಯದ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

(7) ಕಮೀಷನರ ತೀರ್ಮಾನದಿಂದ ಬಾಧಿತನಾದ ಕ್ಲೇಮುದಾರನು ತೀರ್ಮಾನದ ವಿರುದ್ಧವಾಗಿ ಯಾವ ಜಿಲ್ಲಾ ನ್ಯಾಯಾಲಯದ ಸ್ಥಳೀಯ ಅಧಿಕಾರ ವ್ಯಾಪ್ತಿಯೊಳಗೆ ಎಸ್ಟೇಟು ಇರುವುದೋ ಆ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

**19. ಕ್ಲೇಮುದಾರರಿಗೆ ಕಮಿಷನರಿಂದ ಮೊಬಲಗಿನ ಹಂಚಿಕೆ.–** ಈ ಅಧಿನಿಯಮದ ಅಡಿಯಲ್ಲಿ ಕ್ಲೇಮನ್ನು ಅಂಗೀಕರಿಸಿದ ನಂತರ, ಅಂಥ ಕ್ಲೇಮಿನ ಸಂಬಂಧದಲ್ಲಿ ಬಾಕಿ ಇರುವ ಮೊಬಲಗನ್ನು ಕಮೀಷನರು ಯಾರಿಗೆ ಅಂಥ ಮೊಬಲಗು ಬಾಕಿಯಿರುವುದೋ ಆ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದು ಮತ್ತು ಅಂಥ ಸಂದಾಯದ ನಂತರ ಅಂಥ ಕ್ಲೇಮುಗಳ ಸಂಬಂಧದಲ್ಲಿ ಎಸ್ಟೇಟಿನ ಬಗೆಗಿನ ಹೊಣೆಗಾರಿಕೆಗಳು ಮುಕ್ತವಾಗತಕ್ಕದ್ದು.

[1][**19ಎ. ಮಾಲೀಕರಿಗೆ, ವರ್ಗಾವಣೆ ಪಡೆದವರಿಗೆ ಮತ್ತು ಹಿತಾಸಕ್ತಿಯುಳ್ಳ ಇತರೆ ವ್ಯಕ್ತಿಗಳಿಗೆ ಮೊಬಲಗಿನ ಹಂಚಿಕೆ.–** (1) ಎಸ್ಟೇಟಿನ ಸಂಬಂಧದಲ್ಲಿ ಕಮೀಷನರನಿಗೆ ಸಂದಾಯ ಮಾಡಿದ ಹಣದ ಪೈಕಿ, ಅನುಸೂಚಿ 11ರಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ಪೂರೈಸಿದ ತರುವಾಯ ಯಾವುದೇ ಹಣ ಉಳಿದರೆ, ಅವನು ಹಾಗೆ ಉಳಿದ ಹಣವನ್ನು ಮಾಲೀಕರಿಗೆ, ವರ್ಗಾವಣೆ ಪಡೆದವರಿಗೆ ಮತ್ತು ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳಿಗೆ ಹಂಚಿಕೆ ಮಾಡತಕ್ಕದ್ದು.

1. 2001ರ ಅಧಿನಿಯಮ ಸಂಖ್ಯೆ: 19ರ ಮೂಲಕ ದಿನಾಂಕ: 21.11.1996ರಿಂದ ಸೇರಿಸಲಾಗಿದೆ.

(2) ಎಸ್ಟೇಟಿನಲ್ಲಿ ಮಾಲೀಕರಿಗೆ, ವರ್ಗಾವಣೆ ಪಡೆವರಿಗೆ ಮತ್ತು ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳಿಗೆ, ಇಸ್ಟೇಟಿನಲ್ಲಿರುವ ಅವರ ಹಿತಾಸಕ್ತಿಯ ಅನುಪಾತಕ್ಕೆ ಅನುಸಾರವಾಗಿ ಯಾವುದೇ ಸಚಿದಾಯ ಮಾಡುವ ಮೊದಲು, ಕಮೀಷನರನು ಅಂಥ ಮೊಬಲಗನ್ನು ಪೂರ್ಣವಾಗಿ ಅಥವಾ ಭಾಗಶ: ಸ್ವೀಕರಿಸಲು ಅಂಥ ಮಾಲೀಕರು, ವರ್ಗಾವಣೆ ಪಡೆದವರು ಮತ್ತು ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳು ಹೊಂದಿರುವ ಹಕ್ಕಿನ ಸಂಬಂಧದಲ್ಲಿ ಅವನು ಮನದಟ್ಟು ಮಾಡಿಕೊಳ್ಳತಕ್ಕದ್ದು ಮತ್ತು ಅವರ ನಡುವೆ ಮೊಬಲಗಿನ ಹಂಚಿಕೆ ಮಾಡುವುದು ಸ್ಥಿರಿದಂತೆ 7 ಮತ್ತು 8ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಮೊಬಲಗನ್ನು ಪೂರ್ಣವಾಗಿ ಅಥವಾ ಭಾಗಶ: ಸ್ವೀಕರಿಸಲು ಹಕ್ಕುಳ್ಳ ಅಂಥ ಮಾಲೀಕ, ವರ್ಗಾವಣೆ ಪಡೆದವ ಅಥವಾ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸಂದೇಹ ಅಥವಾ ವಿವಾದ ಉಂಟಾಗಿದ್ದ ಸಂದರ್ಭದಲ್ಲಿ, ಕಮೀಷನರನು ಆ ವಿಷಯವನ್ನು ನ್ಯಾಯಾಲಯಕ್ಕೆ ಉಲ್ಲೇಖಿಸತಕ್ಕದ್ದು ಮತ್ತು ನ್ಯಾಯಾಲಯದ ತೀರ್ಮಾನಕ್ಕನುಸಾರ ಹಂಚಿಕೆ ಮಾಡತಕ್ಕದ್ದು.

(3) ಸ್ವತ್ತು ಎಸ್ಟೇಟಿನ ಭಾಗವಾಗಿರುವ ಬಗ್ಗೆ ಗೊತ್ತುಪಡಿಸಿದ ದಿನಾಂಕದಂದು ಇದ್ದ ಸ್ವತ್ತಿನ ಮೌಲ್ಯವನ್ನು ಸೂಕತವಾಗಿ ಗಮನಿಸಿ, ಎಸ್ಟೇಟಿನ ಸಂಬಂಧದಲ್ಲಿ ಮಾಲೀಕರು, ವರ್ಗಾವಣೆ ಪಡೆದವರು ಮತ್ತು ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳ ನಡುವೆ ಮೊಬಲಗಿನ ಹಂಚಿಯನ್ನು ನ್ಯಾಯಾಲಯವು ನಿರ್ಧರಿಸತಕ್ಕದ್ದು.

(4) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಎಸ್ಟೇಟಿಗೆ ಸಂಬಂಧಿಸಿದಂತೆ ಮಾಲೀಕರು, ವರ್ಗಾವಣೆ ಪಡೆದವರು ಅಥವಾ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳು ಹೊಂದಿರುವ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಯ ಬಗ್ಗೆ ನ್ಯಾಯಾಲಯದ ಮುಂದೆ ರುಜುವಾತುಪಡಿಸಲು ಸಾಕ್ಷ್ಯ ನೀಡುವುದಕ್ಕೆ ಅನುಮತಿ ಇರತಕ್ಕದ್ದು.

**ವಿವರಣೆ.–** ಈ ಪ್ರಕರಣದಲ್ಲಿ ಎಸ್ಟೇಟಿಗೆ ಸಂಬಂಧಿಸಿದಂತೆ 'ನ್ಯಾಯಾಲಯ' ಎಂದರೆ ಯಾವ ಪ್ರಧಾನ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ಎಸ್ಟೇಟು ಇದೆಯೋ ಆ ಪ್ರಧಾನ ನ್ಯಾಯಾಲಯ"][1]

1. 2001ರ ಅಧಿನಿಯಮ ಸಂಖ್ಯೆ 19ರ ಮೂಲಕ ದಿನಾಂಕ 21-11-1996ರಿಂದ ಸೇರಿಸಲಾಗಿದೆ.

**20. ಹಂಚಿಕೆ ಮಾಡದ ಅಥವಾ ಕ್ಲೇಮು ಮಾಡದ ಮೊಬಲಗಿನ ಹಣವನ್ನು ಸಾಮಾನ್ಯ ಕಂದಾಯ ಖಾತೆಗೆ ಜಮೆ ಮಾಡತಕ್ಕದ್ದು.**- ಕಮಿಷನರಿಗೆ ಸಂದಾಯ ಮಾಡಿದ ಯಾವುದೇ ಮೊಬಲಗು ಕಮಿಷನರ ಹುದ್ದೆಯನ್ನು ಅಂತಿಮವಾಗಿ ಕೊನೆಗೊಳಿಸುವ ದಿನಾಂಕಕ್ಕೆ ನಿಕಟಪೂರ್ವ ದಿನಾಂಕದಂದು ಹಂಚಿಕೆ ಮಾಡಿಲ್ಲದೆ ಅಥವಾ ಕ್ಲೇಮು ಮಾಡಿಲ್ಲದೆ ಉಳಿದಿರುವಲ್ಲಿ ಆ ಮೊಬಲಗನ್ನು ಕಮಿಷನರು ರಾಜ್ಯ ಸರ್ಕಾರದ ಸಾಮಾನ್ಯ ಕಂದಾಯ ಖಾತೆಗೆ ವರ್ಗಾಯಿಸತಕ್ಕದ್ದು. ಆದರೆ ಹಾಗೆ ವರ್ಗಾಯಿಸಲಾದ ಯಾವುದೇ ಮೊಬಲಗಿನ ಬಗೆಗಿನ ಕ್ಲೇಮನ್ನು ಅಂಥ ಸಂದಾಯಕ್ಕೆ ಹಕ್ಕುಳ್ಳ ವ್ಯಕ್ತಿಯು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಆ ಬಗ್ಗೆ ಅಂಥ ವರ್ಗಾವಣೆ ಮಾಡಿಲ್ಲದಿದ್ದರೆ ಹೇಗೋ ಹಾಗೆ ವ್ಯವಹರಿಸತಕ್ಕದ್ದು ಮತ್ತು ಕ್ಲೇಮಿನ ಸಂದಾಯಕ್ಕಾಗಿ ಮಾಡಲಾಗುವ ಆದೇಶ ಯಾವುದಾದರೂ ಇದ್ದಲ್ಲಿ ಅದನ್ನು ಕಂದಾಯದ ಮರುಪಾವತಿಗಾಗಿ ಮಾಡಿದ ಆದೇಶದಂತೆ ಭಾವಿಸತಕ್ಕದ್ದು.

**21. ಟ್ರಸ್ಟಿಗಳ ಮಂಡಲಿ.**- (1) ಎಸ್ಟೇಟಿನ ಆಡಳಿತ ಮತ್ತು ನಿರ್ವಹಣೆಗಾಗಿ ಕೆಳಕಂಡವರನ್ನು ಒಳಗೊಂಡ ಒಂದು ಟ್ರಸ್ಟಿಗಳ ಮಂಡಲಿ ಇರತಕ್ಕದ್ದು:-

1. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ - ಅಧ್ಯಕ್ಷರು

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, - ಸದಸ್ಯ ಕರ್ನಾಟಕ ಸರ್ಕಾರ

3. ಸರ್ಕಾರದ ಕಾರ್ಯದರ್ಶಿ, ಕಾನೂನು ಇಲಾಖೆ - ಸದಸ್ಯ ಕರ್ನಾಟಕ ಸರ್ಕಾರ.

4. ಅರಣ್ಯ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ, - ಸದಸ್ಯ ಕರ್ನಾಟಕ ಸರ್ಕಾರ.

5. ಸರ್ಕಾರದ ಕಾರ್ಯದರ್ಶಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆ - ಸದಸ್ಯ ಕರ್ನಾಟಕ ಸರ್ಕಾರ

6. ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, - ಸದಸ್ಯ ಕರ್ನಾಟಕ ಸರ್ಕಾರ

7. ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತನಾಗುವ ರಾಜ್ಯ ಲಲಿತ ಕಲಾ - ಸದಸ್ಯ
ಅಕೆಡಮಿಯನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿ.

8. ಕಾರ್ಯದರ್ಶಿ, ಸಂಸ್ಕೃತಿ ಇಲಾಖೆ, ಭಾರತ ಸರ್ಕಾರ ಅಥವಾ - ಸದಸ್ಯ ಅವರ ಪ್ರತಿನಿಧಿ.

9. ವಿದೇಶಾಂಗ ಕಾರ್ಯದರ್ಶಿ, ವಿದೇಶಾಂಗ ವ್ಯವಹಾರಗಳ ಮಂತ್ರಾಲಯ, - ಸದಸ್ಯ ಭಾರತ ಸರ್ಕಾರ ಅಥವಾ ಅವರ ಪ್ರತಿನಿಧಿ.

[1][XXX

XXX

XXX

XXX][1]

14. ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತನಾಗುವ ಕರ್ನಾಟಕ ಚಿತ್ರಕಲಾ - ಸದಸ್ಯ ಪರಿಷತ್ತನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿ

15.  ಕಾರ್ಯನಿರ್ವಾಹಕ ಅಧಿಕಾರಿ  - ಸದಸ್ಯ ಕಾರ್ಯದರ್ಶಿ

(2) ಮಂಡಲಿಯು ನಿಯಮಿಸಬಹುದಾದ ಅಂಥ ಸಮಯ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ಅಂಥ ರೀತಿಯಲ್ಲಿ ತನ್ನ ಕಾರ್ಯಕಲಾಪ ನಡೆಸತಕ್ಕದ್ದು.

1. 2017ರ ಅಧಿನಿಯಮ ಸಂಖ್ಯೆ 33ರ ಮೂಲಕ ದಿನಾಂಕ 11-07-2017ರಿಂದ ಬಿಟ್ಟುಬಿಡಲಾಗಿದೆ.

**22. ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು.-** ಈ ಅಧಿನಿಯಮದ ಅಡಿಯಲ್ಲಿ ಮಾಡಿದ ನಿಯಮಗಳಿಗೊಳಪಟ್ಟು, ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು ಈ ಮುಂದಿನಂತಿರತಕ್ಕದ್ದು, ಎಂದರೆ:-

(ಎ) ಎಸ್ಟೇಟಿನ ಆಡಳಿತ ಮತ್ತು ನಿರ್ವಹಣೆ;

(ಬಿ) ಡಾ:ಎಸ್.ರೋರಿಕ್ ಮತ್ತು ಶ್ರೀಮತಿ ದೇವಿಕಾರಾಣಿ ರೋರಿಕ್ ಅವರ ಹೆಸರಿನಲ್ಲಿ ಕಲಾ ವಸ್ತು ಪ್ರದರ್ಶನ ಮಂದಿರ ಹಾಗೂ ಸಂಗ್ರಹಾಲಯವನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ಸಿ) ಎಸ್ಟೇಟಿನಲ್ಲಿ ಸಾರ್ವಜನಿಕ ಉದ್ಯಾನವನಗಳನ್ನು ರೂಪಿಸುವುದು ಮತ್ತು ನಿರ್ವಹಿಸುವುದು ಮತ್ತು ಅಲ್ಲಿರುವ ಮರಗಳನ್ನು ಸಂರಕ್ಷಿಸುವುದು;

(ಡಿ) ಎಸ್ಟೇಟಿನಲ್ಲಿ ಲಿನೋಲೆ ಬೆಳೆಯನ್ನು ಬೆಳೆಯುವುದು ಮತ್ತು ಸಂರಕ್ಷಿಸುವುದು;

(ಇ) ಡಾ:ಎಸ್.ರೋರಿಕ್ ಮತ್ತು ಶ್ರೀಮತಿ ದೇವಿಕಾರಾಣಿ ರೋರಿಕ್ ಅವರ ವರ್ಣಚಿತ್ರಗಳು ಮತ್ತು ಕಲಾ ವಸ್ತುಗಳು ಮತ್ತು ಇತರೆ ಸಾಹಿತ್ಯದ ಕೃತಿಗಳನ್ನು ಸಂಗ್ರಹಿಸುವುದಕ್ಕೆ ಸಂಬಂಧಪಟ್ಟಂತೆ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳುವುದು;

(ಎಫ್) ರಾಜ್ಯ ಸರ್ಕಾರವು ವಿಧಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಸಾರ್ವಜನಿಕ ಉದ್ಯಾನವನಗಳು ಹಾಗೂ ವಸ್ತುಸಂಗ್ರಹಾಲಯ, ಕಲಾ ವಸ್ತು ಪ್ರದರ್ಶನ ಮಂದಿರಗಳಿಗೆ ಪ್ರವೇಶ ಶುಲ್ಕ ವಿಧಿಸುವುದು; ಮತ್ತು

(ಜಿ) ಮಂಡಲಿಯು ಎಸ್ಟೇಟಿನ ದಕ್ಷ ಆಡಳಿತಕ್ಕಾಗಿ ನಿಯಮಿಸಬಹುದಾದ ಮತ್ತು ಅದಕ್ಕೆ ಪ್ರಾಸಂಗಿಕವಾದ ಅಥವಾ ಸಹಾಯಕವಾದ ಇತರ ಅಂಥ ಯಾವುದೇ ಕೃತ್ಯವನ್ನು ಮಾಡುವುದು.

**23. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ನೇಮಕ.-** (1) ರಾಜ್ಯ ಸರ್ಕಾರವು ಮಂಡಲಿಗೆ ಒಬ್ಬ ಕಾರ್ಯನಿರ್ವಾಹಕ ಅಧಿಕಾರಿಯನ್ನು ಮತ್ತು ಅವನಿಗೆ ಸಹಾಯ ಮಾಡಲು ತಾನು ಅವಶ್ಯವೆಂದು ಭಾವಿಸುವಷ್ಟು ಸಂಖ್ಯೆಯ ಇತರ ಅಧಿಕಾರಿಗಳನ್ನು ನೇಮಕ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳಿಗೆ ಸಂದಾಯ ಮಾಡಬಹುದಾದ ವೇತನ ಮತ್ತು ಭತ್ಯೆಗಳನ್ನು ಮಂಡಲಿಯ ನಿಧಿಯಿಂದ ಭರಿಸತಕ್ಕದ್ದು.

(3) ರಾಜ್ಯ ಸರ್ಕಾರವು ನೇಮಕ ಮಾಡಿದ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳನ್ನು ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರರೆಂಬುದಾಗಿ ಭಾವಿಸತಕ್ಕದ್ದು.

**24. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ರಾಜ್ಯ ಸರ್ಕಾರವು ನಿಯಮಗಳ ಮೂಲಕ ಅಥವಾ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ವಿಧಿಸಬಹುದಾದ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ಮತ್ತು ಮಂಡಲಿಯ ಸಾಮಾನ್ಯ ನಿಯಂತ್ರಣಕ್ಕೊಳಪಟ್ಟು ಕಾರ್ಯನಿರ್ವಾಹಕ ಅಧಿಕಾರಿಯು,-

(ಎ) ಮಂಡಲಿಯ ವ್ಯವಹಾರಗಳ ನಿರ್ವಹಣೆಯ ಅಧಿಕಾರವನ್ನು ಹೊಂದಿರತಕ್ಕದ್ದು;

(ಬಿ) ಮಂಡಲಿಯ ಸ್ವತ್ತುಗಳು, ದಾಖಲೆಗಳು, ಆಭರಣಗಳು, ಹಣ, ವರ್ಣಚಿತ್ರಗಳು, ನಿಧಿಗಳು ಮತ್ತು ಮಂಡಲಿಗೆ ಸೇರಿದ ಇತರ ಅಮೂಲ್ಯ ವಸ್ತುಗಳ ಯುಕ್ತ ಸ್ವಾಧೀನತೆಯನ್ನು ಹೊಂದಿರಲು ಜವಾಬ್ದಾರನಾಗಿರತಕ್ಕದ್ದು;

(ಸಿ) ಮಂಡಲಿಯ ಆದಾಯಗಳ ಸೂಕ್ತ ವಸೂಲಿಗೆ ಮತ್ತು ವೆಚ್ಚಗಳನ್ನು ಭರಿಸಲು ಏರ್ಪಾಡು ಮಾಡತಕ್ಕದ್ದು.

(2) ಕಾರ್ಯನಿರ್ವಾಹಕ ಅಧಿಕಾರಿಯು, ತುರ್ತು ಪರಿಸ್ಥಿತಿಯಲ್ಲಿ, ವರ್ಷದ ಬಜೆಟ್‌ನಲ್ಲಿ ಹಣ ಒದಗಿಸಿಲ್ಲದ ಯಾವುದೇ ಕಾಮಗಾರಿಯನ್ನು ನಿರ್ವಹಿಸುವುದು ಅಥವಾ ಯಾವುದೇ ಕೃತ್ಯವನ್ನು ತಕ್ಷಣ ಮಾಡುವುದು ಮಂಡಲಿಯ ಸ್ವತ್ತುಗಳ ಸಂರಕ್ಷಣೆಗೆ ಅವಶ್ಯಕವೆಂದು ಅವನು ಅಭಿಪ್ರಾಯಪಡುವಂಥ ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಅಥವಾ ಯಾವುದೇ ಕೃತ್ಯವನ್ನು ಮಾಡಲು ನಿರ್ದೇಶನ ನೀಡಬಹುದು ಮತ್ತು ಅಂಥ ಕಾಮಗಾರಿಯ ನಿರ್ವಹಣೆ ಅಥವಾ ಕೃತ್ಯವನ್ನು ಮಾಡಲು ತಗಲುವ ವೆಚ್ಚವನ್ನು ಮಂಡಲಿಯ ನಿಧಿಯಿಂದ ಸಂದಾಯ ಮಾಡತಕ್ಕದ್ದೆಂದು ನಿರ್ದೇಶನ ನೀಡಬಹುದು:

ಪರಂತು, ಕಾರ್ಯನಿರ್ವಾಹಕ ಅಧಿಕಾರಿಯು ಈ ಉಪ-ಪ್ರಕರಣದ ಅಡಿಯಲ್ಲಿ ಕೈಗೊಂಡ ಯಾವುದೇ ಕ್ರಮದ ಬಗ್ಗೆ ಮತ್ತು ಅದಕ್ಕೆ ಕಾರಣಗಳನ್ನು ಕೂಡಲೇ ಮಂಡಲಿಗೆ ವರದಿ ಮಾಡತಕ್ಕದ್ದು.

(3) ಕಾರ್ಯನಿರ್ವಾಹಕ ಅಧಿಕಾರಿಯು 23ನೇ ಪ್ರಕರಣದ ಅಡಿಯಲ್ಲಿ ಅವನಿಗೆ ಸಹಾಯ ಮಾಡಲು ನೇಮಕ ಮಾಡಲಾದ ಯಾರೇ ಅಧಿಕಾರಿಗೆ, ಮಂಡಲಿಯು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ವಿಧಿಸಬಹುದಾದ ಅಂಥ ನಿರ್ಬಂಧ ಮತ್ತು ಷರತ್ತುಗಳಿಗೊಳಪಟ್ಟು ಮತ್ತು ಪ್ರತ್ಯಾಯೋಜನೆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಪರಿಮಿತಿಗಳು ಮತ್ತು ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೊಳಪಟ್ಟು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅವನಿಗೆ ಪ್ರದತ್ತವಾದ ಯಾವುವೇ ಅಧಿಕಾರಗಳು ಮತ್ತು ವಿಧಿಸಿದ ಯಾವುವೇ ಕರ್ತವ್ಯಗಳನ್ನು ಪ್ರತ್ಯಾಯೋಜಿಸಬಹುದು.

(4) ಮಂಡಲಿಯು, ನಿಯಮಿಸಬಹುದಾದಂಥ ಅದರ ಅಧಿಕಾರಗಳು, ಕರ್ತವ್ಯಗಳು ಅಥವಾ ಪ್ರಕಾರ್ಯಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

**25. ಮಂಡಲಿಯಿಂದ ಅಥವಾ ಮಂಡಲಿಯ ವಿರುದ್ಧ ಹೂಡಲಾಗುವ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳು.**- ಮಂಡಲಿಯು ಹೂಡಿದ ಅಥವಾ ಮಂಡಲಿಯ ವಿರುದ್ಧ ಹೂಡಲಾದ ಎಲ್ಲ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದಪತ್ರಕ್ಕೆ ಕಾರ್ಯನಿರ್ವಾಹಕ ಅಧಿಕಾರಿಯು ಸಹಿ ಮಾಡತಕ್ಕದ್ದು ಮತ್ತು ಅದರ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ದಾವೆಗಳಲ್ಲಿನ ಮತ್ತು ಕಾನೂನು ವ್ಯವಹರಣೆಗಳಲ್ಲಿನ ಎಲ್ಲ ಪ್ರಕ್ರಿಯೆಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗೆ ನೀಡತಕ್ಕದ್ದು ಅಥವಾ ಅವನಿಗೆ ಜಾರಿ ಮಾಡತಕ್ಕದ್ದು.

**26. ನಿಧಿ.**- (1) ಮಂಡಲಿಯ ನಿಧಿ ಎಂದು ಕರೆಯಲಾಗುವ ಒಂದು ನಿಧಿ ಇರತಕ್ಕದ್ದು ಮತ್ತು ಇದನ್ನು ಮಂಡಲಿಯು ನಿರ್ವಹಿಸತಕ್ಕದ್ದು.

(2) ಈ ಮುಂದಿನವುಗಳು ಮಂಡಲಿಯ ನಿಧಿಯ ಒಂದು ಭಾಗವಾಗಿರತಕ್ಕದ್ದು ಅಥವಾ ಅವುಗಳನ್ನು ಅದಕ್ಕೆ ಸಂದಾಯ ಮಾಡತಕ್ಕದ್ದು, ಎಂದರೆ:-

(i) ಮಂಡಲಿಯಲ್ಲಿ ನಿಹಿತವಾಗಿರುವ ಎಸ್ಟೇಟಿನಿಂದ ಬರುವ ಆದಾಯ ಅಥವಾ ಯಾವುದೇ ಸ್ವತ್ತಿನ ಉತ್ಪತ್ತಿ;

(ii) ಈ ಅಧಿನಿಯಮದ ಅಡಿಯಲ್ಲಿ ಮಂಡಲಿಯು ಅಥವಾ ಮಂಡಲಿಯ ಪರವಾಗಿ ಸಂದಾಯ ಮಾಡಿದ ಅಥವಾ ವಿಧಿಸಲಾದ ಎಲ್ಲ ಫೀಜುಗಳು ಮತ್ತು ಚಾರ್ಜುಗಳು;

(iii) ರಾಜ್ಯ ಸರ್ಕಾರ ಅಥವಾ ಯಾವುದೇ ಇತರ ಪ್ರಾಧಿಕಾರ ನೀಡಿದ ಎಲ್ಲ ಅನುದಾನಗಳು ಮತ್ತು ವಂತಿಗೆಗಳು;

(iv) ಯಾವೊಬ್ಬ ವ್ಯಕ್ತಿಯು ನೀಡಿದ ಎಲ್ಲ ವಂತಿಗೆಗಳು ಮತ್ತು ದೇಣಿಗೆಗಳು;

(v) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮಂಡಲಿಯು ಸಾಲವಾಗಿ ಪಡೆದ ಮೊತ್ತ;

(vi) ಯಾವುವೇ ಇತರ ಮೊತ್ತಗಳು.

**27. ಸಾಲ ತೆಗೆದುಕೊಳ್ಳಲು ಅಧಿಕಾರ.-** ಮಂಡಲಿಯು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವುದೇ ಮೊಬಲಗನ್ನು ಸಾಲವಾಗಿ ತೆಗೆದುಕೊಳ್ಳಬಹುದು.

**28. ನಿಧಿಯ ಬಳಕೆ.-** ಈ ಕೆಳಕಂಡ ಎಲ್ಲ ಅಥವಾ ಯಾವುವೇ ಉದ್ದೇಶಗಳಿಗಾಗಿ ನಿಧಿಯನ್ನು ಬಳಸಬಹುದು, ಎಂದರೆ:-

(i) ಎಸ್ಟೇಟಿನ ನಿರ್ವಹಣೆ, ವ್ಯವಸ್ಥಾಪನೆ ಮತ್ತು ಆಡಳಿತ;

(ii) ಸಾರ್ವಜನಿಕ ಉದ್ಯಾನವನವನ್ನು ರೂಪಿಸುವುದು ಮತ್ತು ನಿರ್ವಹಿಸುವುದು;

(iii) ಕಲಾವಸ್ತು ಪ್ರದರ್ಶನ ಮಂದಿರ ಹಾಗೂ ಸಂಗ್ರಹಾಲಯವನ್ನು ಸ್ಥಾಪಿಸುವುದು ಮತ್ತು ಅದರ ನಿರ್ವಹಣೆ;

(iv) ಎಸ್ಟೇಟಿನ ಆವರಣದೊಳಗೆ ಬೆಳೆದಿರುವ ಗಿಡಮರಗಳ ಸಂರಕ್ಷಣೆ;

(v) ಲಿನೋಲೆ ಬೆಳೆಯ ಸಾಗುವಳಿ;

(vi) 23ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ವೇತನಗಳು ಮತ್ತು ಭತ್ಯೆಗಳ ಸಂದಾಯ;

(vii) ನಿಯಮಿಸಬಹುದಾದಂಥ ಯಾವುವೇ ಇತರ ಉದ್ದೇಶಗಳು;

**29. ಲೆಕ್ಕಪರಿಶೋಧನೆ.-** (1) ರಾಜ್ಯ ಸರ್ಕಾರವು ಪ್ರತಿ ವರ್ಷ, ಮಂಡಲಿಯ ಲೆಕ್ಕಪತ್ರಗಳನ್ನು ಪರಿಶೀಲಿಸಲು ಒಬ್ಬ ಲೆಕ್ಕಪರಿಶೋಧಕನನ್ನು ನೇಮಿಸತಕ್ಕದ್ದು ಮತ್ತು ಮಂಡಲಿಯ ನಿಧಿಯಿಂದ ಅವನಿಗೆ ಸಂದಾಯ ಮಾಡತಕ್ಕ ಸಂಭಾವನೆಯನ್ನು ನಿಗದಿಪಡಿಸತಕ್ಕದ್ದು, ಲೆಕ್ಕ ಪರಿಶೋಧಕನು ತನ್ನ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(2) ರಾಜ್ಯ ಸರ್ಕಾರವು, ಲೆಕ್ಕ ಪರಿಶೋಧನೆಯ ವರದಿಯ ಒಂದು ಪ್ರತಿಯನ್ನು ಮಂಡಲಿಗೆ ಕಳುಹಿಸತಕ್ಕದ್ದು ಮತ್ತು ಲೆಕ್ಕಪರಿಶೋಧಕನು ಸೂಚಿಸಿದ ಯಾವುವೇ ಲೋಪದೋಷಗಳ ಅಥವಾ ಅಕ್ರಮಗಳ ಬಗ್ಗೆ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಸಮಯದೊಳಗೆ ಅದನ್ನು ಪರಿಹರಿಸುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

**3೦. ಬಜೆಟ್.-** (1) ಕಾರ್ಯನಿರ್ವಾಹಕ ಅಧಿಕಾರಿಯು ಪ್ರತಿ ವರ್ಷವೂ ನಿಗದಿಪಡಿಸಬಹುದಾದಂಥ ಸಮಯದೊಳಗೆ ಮತ್ತು ಅಂಥ ನಮೂನೆಯಲ್ಲಿ ಬಜೆಟನ್ನು ಮತ್ತು ಮುಂಬರುವ ವರ್ಷಕ್ಕಾಗಿ ಮಂಡಲಿಯ ಆದಾಯಗಳ ಮತ್ತು ವೆಚ್ಚಗಳ ಒಂದು ಅಂದಾಜನ್ನು ತಯಾರಿಸತಕ್ಕದ್ದು ಮತ್ತು ಅದನ್ನು ಮಂಡಲಿಯ ಮುಂದೆ ಇಡತಕ್ಕದ್ದು, ಮಂಡಲಿಯು, ಅದನ್ನು ಯಾವುದೇ ಮಾರ್ಪಾಟುಗಳಿಲ್ಲದೇ ಅಥವಾ ಅದು ಸೂಕ್ತವೆಂದು ಭಾವಿಸಬಹುದಾದ ಅಂಥ ಮಾರ್ಪಾಟುಗಳೊಂದಿಗೆ ಅನುಮೋದಿಸಬಹುದು.

(2) ಮಂಡಲಿಯು ಅನುಮೋದಿಸಿದ ಬಜೆಟ್‌ನ ಒಂದು ಪ್ರತಿಯನ್ನು ಯಾವ ವರ್ಷಕ್ಕೆ ಬಜೆಟನ್ನು ತಯಾರಿಸಲಾಗಿದೆಯೋ ಆ ವರ್ಷದ ಹಿಂದಿನ ವರ್ಷ ಮುಕ್ತಾಯವಾಗುವುದಕ್ಕೆ ಎರಡು ತಿಂಗಳ ಮೊದಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

## ಅಧ್ಯಾಯ VI

### ಸಂಕೀರ್ಣ

**31. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.-** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಇತರ ಯಾವುದೇ ಕಾನೂನಿನ ಬಲದಿಂದಾಗಿ ಪರಿಣಾಮ ಹೊಂದಿರುವ ಯಾವುದೇ ಲಿಖಿತದಲ್ಲಿ ಅಥವಾ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಯಾವುದೇ ಪ್ರಾಧಿಕಾರದ ಯಾವುದೇ ಡಿಕ್ರಿ ಅಥವಾ ಆದೇಶದಲ್ಲಿ ಅಸಂಗತವಾಗಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

**32. ಮಂಡಲಿಯು ಸ್ಥಿರೀಕರಿಸಿದ ಹೊರತು ಕರಾರು ಪರಿಣಾಮಕಾರಿಯಾಗಿರುವುದು ನಿಂತುಹೋಗುವುದು.-** 3ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತಗೊಂಡ ಎಸ್ಟೇಟಿಗೆ ಸಂಬಂಧಪಟ್ಟಂತೆ ಮಾಲೀಕರು ಅಥವಾ ವರ್ಗಾವಣೆ ಪಡೆದವರು ಮಾಡಿಕೊಂಡ ಮತ್ತು ಗೊತ್ತುಪಡಿಸಿದ ದಿನಾಂಕದ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಪ್ರತಿಯೊಂದು ಕರಾರು, ಗೊತ್ತುಪಡಿಸಿದ ದಿನಾಂಕದಿಂದ ಮೂವತ್ತು ದಿನಗಳು ಮುಕ್ತಾಯವಾಗುವ ದಿನಾಂಕದಂದು ಮತ್ತು ಅಂದಿನಿಂದ, ಅಂಥ ಕರಾರನ್ನು ಆ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಮಂಡಲಿಯಿಂದ ಲಿಖಿತದಲ್ಲಿ ಸ್ಥಿರೀಕರಿಸಿದ ಹೊರತು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು ಮತ್ತು ಅಂಥ ಕರಾರನ್ನು ಸ್ಥಿರೀಕರಿಸುವಲ್ಲಿ ಮಂಡಲಿಯು ತಾನು ಸೂಕ್ತವೆಂದು ಭಾವಿಸಿದ ಅಂಥ ಬದಲಾವಣೆಗಳನ್ನು ಅಥವಾ ಮಾರ್ಪಾಟುಗಳನ್ನು ಮಾಡಬಹುದು:

ಪರಂತು,

(ಎ) ಅಂಥ ಕರಾರು ಅನುಚಿತ ಹೊಣೆಯುಳ್ಳದ್ದಾಗಿದೆ ಅಥವಾ ಅದನ್ನು ದುರುದ್ದೇಶದಿಂದ ಮಾಡಲಾಗಿದೆ ಅಥವಾ ಮಂಡಲಿಯ ಹಿತಾಸಕ್ತಿಗೆ ಹಾನಿಕರವಾಗಿದೆ ಎಂದು ಮನವರಿಕೆಯಾದ ಹೊರತು, ಮತ್ತು

(ಬಿ) ಕರಾರಿನ ಪಕ್ಷಕಾರರಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಮತ್ತು ಕರಾರನ್ನು ಸ್ಥಿರೀಕರಿಸಲು, ನಿರಾಕರಿಸಲು ಅಥವಾ ಅದರಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಟನ್ನು ಮಾಡಲು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿದ ಹೊರತು,

ಮಂಡಲಿಯು ಕರಾರನ್ನು ಸ್ಥಿರೀಕರಿಸಲು ತಪ್ಪತಕ್ಕದ್ದಲ್ಲ ಮತ್ತು ಅದರಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಟನ್ನು ಮಾಡತಕ್ಕದ್ದಲ್ಲ.

**33. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.-** (1) ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ರಾಜ್ಯ ಸರ್ಕಾರದ ಅಥವಾ ಮಂಡಲಿಯ ವಿರುದ್ಧ ಅಥವಾ ರಾಜ್ಯ ಸರ್ಕಾರದ ಅಥವಾ ಮಂಡಲಿಯ ಯಾವೊಬ್ಬ ಅಧಿಕಾರಿ ಅಥವಾ ಇತರ ನೌಕರನ ವಿರುದ್ಧ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಮಂಡಲಿಯಿಂದ ಪ್ರಾಧಿಕೃತನಾದ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(2) ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ನಷ್ಟಕ್ಕಾಗಿ ರಾಜ್ಯ ಸರ್ಕಾರದ ಅಥವಾ ಮಂಡಲಿಯ ವಿರುದ್ಧ ಅಥವಾ ರಾಜ್ಯ ಸರ್ಕಾರದ ಅಥವಾ ಮಂಡಲಿಯ ಯಾವೊಬ್ಬ ಅಧಿಕಾರಿ ಅಥವಾ ಇತರ ನೌಕರನ ವಿರುದ್ಧ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಮಂಡಲಿಯಿಂದ ಪ್ರಾಧಿಕೃತನಾದ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**34. ದಂಡನೆಗಳು.-** ಯಾವನೇ ವ್ಯಕ್ತಿಯು,-

(ಎ) ಎಸ್ಟೇಟಿನ ಒಂದು ಭಾಗವಾಗಿರುವ ಯಾವುದೇ ಸ್ವತ್ತನ್ನು ತನ್ನ ಸ್ವಾಧೀನತೆ ಅಥವಾ ಅಭಿರಕ್ಷೆಯಲ್ಲಿ ಅಥವಾ ನಿಯಂತ್ರಣದಲ್ಲಿ ಹೊಂದಿದ್ದು, ಅಂಥ ಸ್ವತ್ತನ್ನು ರಾಜ್ಯ ಸರ್ಕಾರ ಅಥವಾ ಮಂಡಲಿಗೆ ಒಪ್ಪಿಸದಿದ್ದರೆ; ಅಥವಾ

(ಬಿ) ಎಸ್ಟೇಟಿನ ಒಂದು ಭಾಗವಾಗಿರುವ ಯಾವುದೇ ಸ್ವತ್ತನ್ನು ಅಕ್ರಮವಾಗಿ ಸ್ವಾಧೀನಕ್ಕೆ ಪಡೆದರೆ ಅಥವಾ ಸ್ವಾಧೀನದಲ್ಲಿಟ್ಟುಕೊಂಡರೆ; ಅಥವಾ

(ಸಿ) ತನ್ನ ಸ್ವಾಧೀನತೆ, ಅಭಿರಕ್ಷೆ ಅಥವಾ ನಿಯಂತ್ರಣದಲ್ಲಿರುವ ಎಸ್ಟೇಟಿಗೆ ಸಂಬಂಧಿಸಿದ ಯಾವುದೇ ದಸ್ತಾವೇಜು ಅಥವಾ ಆಸ್ತಿ ವಿವರಣಾ ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಅಥವಾ ಮಂಡಲಿಗೆ ಅಥವಾ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರವಾಗಿ ಮಂಡಲಿಯು ನಿರ್ದಿಷ್ಟಪಡಿಸಿದ ಯಾವೊಬ್ಬ ವ್ಯಕ್ತಿಗೆ ಅಥವಾ ವ್ಯಕ್ತಿಗಳ ನಿಕಾಯಕ್ಕೆ ಉದ್ದೇಶಪೂರ್ವಕವಾಗಿ ಒಪ್ಪಿಸದಿದ್ದರೆ ಅಥವಾ ಒದಗಿಸಲು ತಪ್ಪಿದರೆ; ಅಥವಾ

(ಡಿ) ಎಸ್ಟೇಟಿನ ಒಂದು ಭಾಗವಾಗಿರುವ ಯಾವುದೇ ಸ್ವತ್ತನ್ನು ಅಕ್ರಮವಾಗಿ ತೆಗೆದರೆ, ಅಥವಾ ನಾಶಪಡಿಸಿದರೆ; ಅಥವಾ

(ಇ) ಈ ಅಧಿನಿಯಮದ ಅಡಿಯಲ್ಲಿನ ಕ್ಲೇಮನ್ನು, ಅದು ಸುಳ್ಳೆಂದು ಅಥವಾ ಒಟ್ಟಾರೆ ಸಮರ್ಪಕವಾಗಿಲ್ಲವೆಂದು ಅವನಿಗೆ ತಿಳಿದಿದ್ದು ಅಥವಾ ಹಾಗೆ ನಂಬಲು ಸಮಂಜಸ ಕಾರಣಗಳಿದ್ದು ಸಲ್ಲಿಸಿದರೆ,

ಅವನು ಎರಡು ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

**35. ಕಂಪನಿಗಳಿಂದ ಅಪರಾಧಗಳು.**-(1) ಕಂಪೆನಿಯು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧವನ್ನು ಮಾಡಿರುವಲ್ಲಿ, ಅಪರಾಧವು ನಡೆದ ಸಮಯದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪೆನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಪಡಿಸತಕ್ಕದ್ದು:

ಪರಂತು, ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲಾ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಉಪಪ್ರಕರಣದಲ್ಲಿರುವುದಾವುದೂ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಕಂಪೆನಿಯು ಈ ಅಧಿನಿಯಮದ ಅಡಿಯಲ್ಲಿನ ಯಾವುವೇ ಅಪರಾಧವನ್ನು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಹೇಳಬಹುದಾದಲ್ಲಿ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

***ವಿವರಣೆ.***- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪೆನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ, ಫರ್ಮಿನ ಪಾಲುದಾರ.

**36. ಪರಿಷ್ಕರಣೆ.**- ರಾಜ್ಯ ಸರ್ಕಾರವು ಯಾವುದೇ ವ್ಯವಹರಣೆಗೆ ಸಂಬಂಧಪಟ್ಟ ಮಂಡಲಿಯ ಅಥವಾ ಕಾರ್ಯನಿರ್ವಾಹಕ ಅಧಿಕಾರಿಯ ದಾಖಲೆಗಳನ್ನು, ಅಂಥ ವ್ಯವಹರಣೆಗಳ ಕ್ರಮಬದ್ಧತೆ, ಅಥವಾ ಅದರಲ್ಲಿ

ನೀಡಲಾದ ತೀರ್ಮಾನ ಅಥವಾ ಆದೇಶದ ಸೂಕ್ತತೆ, ಕಾನೂನುಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾನು ಮನದಟ್ಟುಮಾಡಿಕೊಳ್ಳುವುದಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಪರಿಶೀಲಿಸಬಹುದು.

(2) ತೀರ್ಮಾನವನ್ನು ಅಥವಾ ಆದೇಶವನ್ನು ಮಾರ್ಪಾಟುಗೊಳಿಸಬೇಕೆಂದು, ರದ್ದುಗೊಳಿಸಬೇಕೆಂದು ಅಥವಾ ವಿಪರ್ಯಯಗೊಳಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದರೆ, ಅದು ತದನುಸಾರವಾಗಿ ಆದೇಶ ಹೊರಡಿಸಬಹುದು.

(3) ರಾಜ್ಯ ಸರ್ಕಾರವು, ಯಾವೊಬ್ಬ ಪಕ್ಷಕಾರನಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು (2)ನೇ ಉಪ-ಪ್ರಕರಣದ ಅಡಿಯಲ್ಲಿ ಅವನಿಗೆ ಬಾಧಕವಾಗುವ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(4) ರಾಜ್ಯ ಸರ್ಕಾರವು (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಸ್ವರೂಪದ ಯಾವುದೇ ತೀರ್ಮಾನ ಅಥವಾ ಆದೇಶದ ಜಾರಿಯನ್ನು (2)ನೇ ಉಪ ಪ್ರಕರಣದ ಅಡಿಯಲ್ಲಿ ಅದರ ಅಧಿಕಾರ ಚಲಾವಣೆಯು ಇತ್ಯರ್ಥದಲ್ಲಿರುವಾಗ ತಡೆಹಿಡಿಯಬಹುದು.

**37. ನಿಯಮಗಳ ರಚನಾಧಿಕಾರ.**- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಎಲ್ಲ ಅಥವಾ ಯಾವುವೇ ಉದ್ದೇಶಗಳನ್ನು ಈಡೇರಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದಾದರೂ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:-

(ಎ) 4ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಮಾಹಿತಿಯನ್ನು ನೀಡತಕ್ಕ ಸಮಯ ಮತ್ತು ವಿಧಾನ;

(ಬಿ) 21ನೇ ಪ್ರಕರಣದ ಅಡಿಯಲ್ಲಿ ಮಂಡಲಿಯ ಸಭೆಗಳನ್ನು ಕರೆಯುವುದು ಮತ್ತು ಕಾರ್ಯಕಲಾಪಗಳ ಬಗ್ಗೆ ವ್ಯವಹರಿಸುವುದು;

(ಸಿ) 24ನೇ ಪ್ರಕರಣದ ಅಡಿ, ಕಾರ್ಯನಿರ್ವಾಹಕ ಅಧಿಕಾರಿಯು ಯಾವ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ತನ್ನ ಅಧಿಕಾರಗಳನ್ನು ಚಲಾಯಿಸಬಹುದೋ ಮತ್ತು ತನ್ನ ಕರ್ತವ್ಯಗಳನ್ನು ನಿರ್ವಹಿಸಬಹುದೋ ಆ ನಿರ್ಬಂಧ ಮತ್ತು ಷರತ್ತುಗಳು;

(ಡಿ) 27ನೇ ಪ್ರಕರಣದ ಅಡಿ ಯಾವುದೇ ಮೊಬಲಗನ್ನು ಮಂಡಲಿಯು ಸಾಲವಾಗಿ ಪಡೆಯಬಹುದಾದ ಅಂಥ ಷರತ್ತುಗಳು;

(ಇ) 28ನೇ ಪ್ರಕರಣದ ಅಡಿ ನಿಧಿಯನ್ನು ಬಳಸಬಹುದಾದ ಇತರ ಉದ್ದೇಶಗಳು;

(ಎಫ್) ಮಂಡಲಿಗಾಗಿ ಬಜೆಟ್ ಅಂದಾಜುಗಳನ್ನು ತಯಾರಿಸುವುದು;

(ಜಿ) ಮಂಡಲಿಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧನೆಯ ವರದಿಯಲ್ಲಿ ಒಳಗೊಂಡಿರಬೇಕಾದ ವಿವರಗಳು;

(ಎಚ್) ರಾಜ್ಯ ಸರ್ಕಾರವು ನೇಮಕಮಾಡಿದ ಲೆಕ್ಕ ಪರಿಶೋಧಕರುಗಳಿಗೆ ಸಂದಾಯವಾಗುವ ಮೊಬಲಗುಗಳ ವಸೂಲಿ;

(ಐ) ಮಂಡಲಿಯ ಲೆಕ್ಕಪತ್ರಗಳು, ದಾಖಲೆಗಳು ಮತ್ತು ದಸ್ತಾವೇಜುಗಳ ನಿರ್ವಹಣೆ ಮತ್ತು ಅಭಿರಕ್ಷೆ;

(ಜೆ) ನಿಯಮಿಸುವುದು ಅಗತ್ಯವಾಗಿರುವ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಅನಂತರ ಆದಷ್ಟುಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದನ್ನು ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಇರಿಸತಕ್ಕದ್ದು ಮತ್ತು ಅದನ್ನು ಇರಿಸಲಾದ ಅಧಿವೇಶನವು ಅಥವಾ ಅದರ ನಿಕಟ ತರುವಾಯದ ಅಧಿವೇಶನಗಳು ಮುಗಿಯುವ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ

ನಿಯಮಗಳನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದರೆ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ.

**38. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ ರಾಜ್ಯ ಸರ್ಕಾರವು ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅವಶ್ಯವೆಂದು ತನಗೆ ತೋರಬಹುದಾದಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಆದೇಶವನ್ನು ಮಾಡಬಹುದು:

ಪರಂತು, ಗೊತ್ತುಪಡಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಅಂಥ ಯಾವ ಆದೇಶವನ್ನು ಮಾಡತಕ್ಕದ್ದಲ್ಲ.

* * * *

## ಅನುಸೂಚಿ I

### (2(ಇ), (ಎಫ್) ಮತ್ತು (ಐ) ಪ್ರಕರಣವನ್ನು ನೋಡಿ)

ಶ್ರೀಮತಿ ದೇವಿಕಾರಾಣಿ ರೋರಿಕ್ ಹಾಗೂ ಡಾ:ಎಸ್ ರೋರಿಕ್‌ರು ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ತಾತಗುಣಿ ಎಸ್ಟೇಟ್ ಎಂಬ ಹೆಸರಿನ ಎಸ್ಟೇಟಿನಲ್ಲಿ ಹೊಂದಿದ್ದ ಭೂಮಿಗಳ ವಿವರಗಳು.

| ಗ್ರಾಮದ ಹೆಸರು | ಹೋಬಳಿಯ ಹೆಸರು | ಸರ್ವೆ ಸಂಖ್ಯೆ | ಎಕರೆಗಳಲ್ಲಿ ವಿಸ್ತೀರ್ಣ ಒಟ್ಟು | ಖರಾಬ್ | ನಿವ್ವಳ | ಹೆಕ್ಟೇರುಗಳಲ್ಲಿ ವಿಸ್ತೀರ್ಣ ಒಟ್ಟು | ಖರಾಬ್ | ನಿವ್ವಳ |
|---|---|---|---|---|---|---|---|---|
| **1. ಶ್ರೀಮತಿ ದೇವಿಕಾರಾಣಿ ರೋರಿಕ್‌ರವರು ಹೊಂದಿದ್ದ ಭೂಮಿ:** | | | | | | | | |
| (1) ಉತ್ತರಹಳ್ಳಿ | ಉತ್ತರಹಳ್ಳಿ | 15/1 | 11.05 | 11.00 | 0.05 | 4.50 | 4.45 | 0.05 |
| ಮನವರ್ತಿ | | 15/3ಸಿ | 39.09 | 0.37 | 38.12 | 15.87 | 0.37 | 15.50 |
| ಕಾವಲ್ | | 15/4 | 9.20 | 0.20 | 9.00 | 3.84 | 0.20 | 3.64 |
| | | 16/2 | 13.30 | 0.39 | 12.31 | 5.56 | 0.39 | 5.17 |
| (2) ಬಿ.ಎಂ. | ಕೆಂಗೇರಿ | 127 | 0.25 | - | 0.25 | 0.25 | - | 0.25 |
| ಕಾವಲ್ | | 128 | 59.15 | 0.25 | 58.30 | 24.02 | 0.25 | 23.77 |
| | | 130 | 91.32 | 0.16 | 91.16 | 37.15 | 0.16 | 36.99 |
| | | | 225.16 | 14.17 | 210.39 | 91.19 | 5.82 | 85.37 |
| **2. ಶ್ರೀ ಯಸ್. ರೋರಿಕ್‌ರವರು ಹೊಂದಿದ್ದ ಭೂಮಿ.-** | | | | | | | | |
| (1) ಉತ್ತರಹಳ್ಳಿ | ಉತ್ತರಹಳ್ಳಿ | 38 | 100.00 | - | 100.00 | 40.46 | - | 40.46 |
| ಮನವರ್ತಿ | (12) | 14 | 18.17 | - | 18.17 | 7.46 | - | 7.46 |
| ಕಾವಲ್ | | 15/2 | 21.24 | 0.25 | 21.00 | 8.75 | 0.25 | 8.50 |
| | | 15/3ಬಿ | 37.08 | 10.22 | 26.26 | 15.05 | 4.27 | 10.78 |
| | | 15/3ಡಿ | 10.25 | 0.21 | 10.04 | 4.30 | 0.21 | 4.09 |
| | | 16/1 | 13.12 | 0.20 | 12.32 | 5.38 | 0.20 | 5.18 |
| (2) ಬಿ.ಎಂ. | ಕೆಂಗೇರಿ | 124 | 14.05 | 2.33 | 11.12 | 5.72 | 1.14 | 4.58 |
| ಕಾವಲ್ | | 126 | 23.28 | 0.10 | 23.18 | 9.59 | 0.10 | 9.49 |
| (3) ಆಗರ | ಕೆಂಗೇರಿ | 57 | 0.17 | - | 0.17 | 0.17 | - | 0.17 |
| | | 61(ಭಾಗ) | 4.00 | - | 4.00 | 1.62 | - | 1.62 |
| | | | 243.17 | 15.11 | 228.06 | 98.50 | 6.17 | 92.33 |

3. ಕ್ರಮ ಸಂಖ್ಯೆ 1 ಮತ್ತು 2 ರಲ್ಲಿ ನಿರ್ದಿಷ್ಟಪಡಿಸಿರುವ ವಿಸ್ತೀರ್ಣದ ಭೂಮಿಯಲ್ಲಿ ಈ ಕೆಳಗಿನ ಭೂಮಿಗಳನ್ನು ಕೆ.ಟಿ. ಪ್ಲಾಂಟೇಷನ್ಸ್, ಪ್ರೈವೇಟ್ ಲಿಮಿಟೆಡ್‌ಗೆ ಮಾರಲಾಗಿದ್ದು, ಸಂಖ್ಯೆ 9, ವಿನಾಯಕ ಬಿಲ್ಡಿಂಗ್ಸ್ ಸಂಪಿಗೆ ರಸ್ತೆ, 1ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560003-ಇಲ್ಲಿ ಇದರ ರಿಜಿಸ್ಟರ್ಡ್ ಕಚೇರಿ ಇದೆ.

| | | | | | | | | |
|---|---|---|---|---|---|---|---|---|
| (1) ಬಿ.ಎಂ. | ಕೆಂಗೇರಿ | 124 | 14.05 | 2.33 | 11.12 | 5.72 | 1.14 | 4.58 |
| ಕಾವಲ್ | | 126 | 23.28 | 0.10 | 23.18 | 9.59 | 0.10 | 9.49 |
| (2) ಆಗರ | ಕೆಂಗೇರಿ | 57 | 0.17 | 0.00 | 0.17 | 0.17 | – | 0.17 |
| | 61(ಭಾಗ) | 3.15 | – | 3.15 | 1.37 | – | 1.37 | |
| (3) ಉತ್ತರಹಳ್ಳಿ | ಉತ್ತರಹಳ್ಳಿ | | | | | | | |
| ಮನವರ್ತಿ | (12) | 38 | 100.00 | – | 100.00 | 40.46 | – | 40.46 |
| ಕಾವಲ್ | | | | | | | | |
| | | | 141.25 | 3.03 | 138.22 | 57.31 | 1.24 | 56.07 |

## ಅನುಸೂಚಿ II

(15,16,17 ಮತ್ತು 18ನೇ ಪ್ರಕರಣಗಳನ್ನು ನೋಡಿ)

ಎಸ್ಟೇಟಿಗೆ ಸಂಬಂಧಪಟ್ಟಂತೆ ಹೊಣೆಗಾರಿಕೆಗಳನ್ನು ವಿಮೋಚನೆಗೊಳಿಸಲು ಆದ್ಯತಾ ಕ್ರಮ.

### ಪ್ರವರ್ಗ I

ಎಸ್ಟೇಟಿನ ನೌಕರರಿಗೆ ಸಂದಾಯವಾಗತಕ್ಕ ಮಜೂರಿಗಳು, ವೇತನಗಳು ಮತ್ತು ಇತರ ಬಾಕಿಗಳು.

### ಪ್ರವರ್ಗ II

ಈ ಕೆಳಗೆ ತಿಳಿಸಿರುವವುಗಳು ಜಾಮೀನು ಸಹಿತವಾಗಿ ಕೊಡಲಾದ ಸಾಲದ ಅಸಲು ಮೊಬಲಗು: -

(i) ಕೇಂದ್ರ ಸರ್ಕಾರ

(ii) ರಾಜ್ಯ ಸರ್ಕಾರ

(iii) ಬ್ಯಾಂಕುಗಳು

(iv) ಸಾರ್ವಜನಿಕ ಹಣಕಾಸು ಸಂಸ್ಥೆಗಳು

(v) ಇತರೆ

### ಪ್ರವರ್ಗ III

ಈ ಕೆಳಗೆ ತಿಳಿಸಿರುವವುಗಳು ಜಾಮೀನು ರಹಿತವಾಗಿ ಕೊಡಲಾದ ಸಾಲದ ಅಸಲು ಮೊಬಲಗು: -

(i) ಕೇಂದ್ರ ಸರ್ಕಾರ

(ii) ರಾಜ್ಯ ಸರ್ಕಾರ

(iii) ಬ್ಯಾಂಕುಗಳು

(iv) ಸಾರ್ವಜನಿಕ ಹಣಕಾಸು ಸಂಸ್ಥೆಗಳು

### ಪ್ರವರ್ಗ IV

(ಎ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಅಥವಾ ಸರಕುಗಳ ಸರಬರಾಜು ಅಥವಾ ಸೇವೆಗಳಿಗಾಗಿ ರಾಜ್ಯ ಸರ್ಕಾರ ಅಥವಾ ಅರೆ ಸರ್ಕಾರದ ಇತರೆ ಸಂಸ್ಥೆಗಳಿಗೆ ಸಂದಾಯ ಮಾಡಬೇಕಾದ ಯಾವುವೇ ಬಾಕಿಗಳು.

(ಬಿ) IIಅಥವಾ IIIನೇ ಪ್ರವರ್ಗದ ಅಡಿಯಲ್ಲಿ ಬರುವ ಸಾಲಗಳ ಮತ್ತು ಮುಂಗಡಗಳ ಮೇಲಿನ ಬಡ್ಡಿಯ ಬಾಕಿಗಳು ಮತ್ತು ಇತರ ಬಾಕಿಗಳು.

### ಪ್ರವರ್ಗ V

(ಎ) ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ ಮತ್ತು ಸ್ಥಳೀಯ ಪ್ರಾಧಿಕಾರಗಳಿಗೆ ಬಾಕಿ ಇರುವ ಕಂದಾಯ, ತೆರಿಗೆಗಳು, ಉಪಕರಣಗಳು, ದರಗಳು ಅಥವಾ ಇತರೆ ಬಾಕಿಗಳು; ಮತ್ತು

(ಬಿ) ಇತರ ಯಾವುವೇ ಸಾಲಗಳು ಅಥವಾ ಬಾಕಿಗಳು.

* * * *

**ಅಧಿಸೂಚನೆ**

**ಬೆಂಗಳೂರು ದಿನಾಂಕ 21ನೇ ನವೆಂಬರ್ 1996 (ಸಂಖ್ಯೆ:ಆರ್‌ಡಿ 76 ಎಲ್‌ಆರ್‌ಎ 96)**

ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ (ಕರ್ನಾಟಕ ಅಧಿನಿಯಮ 1996ರ ಸಂಖ್ಯೆ 19) ಪ್ರಕರಣ 1ರ ಉಪ ಪ್ರಕರಣ (2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ಎಲ್ಲ ಉಪಬಂಧಗಳು ದಿನಾಂಕ 21ನೇ ನವೆಂಬರ್ 1996 ರಂದು ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ.ಹೆಚ್. ನಂಜೇಗೌಡ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ(ಭೂ.ಸು.).

* * * *

## 2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 33

(2017ರ ಜುಲೈ ತಿಂಗಳ 11ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ಅಧಿನಿಯಮ, 2017

(2017ರ ಜುಲೈ ತಿಂಗಳ 06ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ನ್ನು (1996ರ ಕರ್ನಾಟಕ ಅಧಿನಿಯಮ ಸಂಖ್ಯೆ 19) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 21ನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಿದೆ.